www.janavaadi.in

# ಜನವಾದಿ

ರಾಯಚೂರು
ಕಲಬುರಗಿ
ಯಾದಗಿರಿ
ಕೊಪ್ಪಳ
ಬಳ್ಳಾರಿ
ಬೀದರ್

ಸಂಪಾದಕ : ಬಸವರಾಜ ಹೆಚ್
Editor : Basavaraj H

ಜನರ ಅಂತರಂಗದ ಧ್ವನಿ
ಕನ್ನಡ ದಿನಪತ್ರಿಕೆ

JANAVAADI
Kannada Daily News Paper

ಸಂಪುಟ : 11 ಸಂಚಿಕೆ : 106 ಪುಟ:4 ರಾಯಚೂರು ರವಿವಾರ 17–11–2024 RNI NO.KARKAN/2012/56428 ಮೊಬೈಲ್: 9448300139,9449711232. e-mail : janavaadi@gmail.com ಬೆಲೆ : 2 ರೂ.

VOLUME : 11 ISSUE : 106 PAGES : 4 RAICHUR SUNDAY 17-11-2024 RNI NO.KARKAN/2012/56428 MOBILE:9448300139,9449711232. E-MAIL:janavaadi@gmail.com PRICE : 2 RS.

## ಕೋವಿಡ್ ಹಗರಣ, ಸಚಿವ ಪ್ರಹ್ಲಾದ್ ಜೋಶಿ ಬಂಧನ ಸಾಧ್ಯತೆ- ದಿನೇಶ್ ಗುಂಡೂರಾವ್

ಮಂಗಳೂರು ನ 16– ಕೋವಿಡ್ ಅಕ್ರಮ ಕುರಿತ ನಿವೃತ್ತ ನ್ಯಾ.ಮೈಕಲ್ ಡಿ.ಕುನ್ಹಾ ನೇತೃತ್ವದ ತನಿಖಾ ಆಯೋಗ ಮಧ್ಯಂತರ ವರದಿ ಬಗ್ಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ವಿವಾದಾತ್ಮಕ ಹೇಳಿಕೆ ನೀಡಿದ್ದು, ಈ ವಿಚಾರದಲ್ಲಿ ಜೋಶಿ ಅವರ ಬಂಧನವಾಗಬಹುದು ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ ನೀಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅವರು, ಬಿಜೆಪಿ ಅವಧಿಯಲ್ಲಿ ಕೋವಿಡ್ ಸಾಮಗ್ರಿ ಖರೀದಿಯಲ್ಲಿ ಹಗರಣವಾಗಿದೆ. ನ್ಯಾ.ಡಿ.ಕುನ್ಹಾ ಪ್ರಾಥಮಿಕ ವರದಿ ಸರ್ಕಾರಕ್ಕೆ ನೀಡಿದ್ದಾರೆ. ವರದಿ ಆಧಾರದಲ್ಲಿ ಸರ್ಕಾರ ತನಿಖೆಗೆ ಆದೇಶ ನೀಡಿದೆ. ಈ ಕುರಿತಾಗಿ ಜೋಶಿ ಅವರ ಹೇಳಿಕೆಗೆ ಆಕ್ರೋಶ ವ್ಯಕ್ತವಾಗಿದೆ. ಕುನ್ಹಾ ಅವರು ಪ್ರಾಮಾಣಿಕ ನ್ಯಾಯಮೂರ್ತಿಯಾಗಿದ್ದಾರೆ. ಅವರ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿರುವ ಜೋಶಿ ಅವರ ಬಂಧನವಾದರೂ ಆಗಬಹುದು ಎಂದು ಸರ್ಕಾರದ ತನಿಖೆಗೆ ದಿನೇಶ್ ಗುಂಡೂರಾವ್ ಸಮರ್ಥಿಸಿಕೊಂಡಿದ್ದಾರೆ.

### ರಾಯಚೂರು ಪೇಟೆ ದರ

**ಸಣ್ಣ ಭತ್ತ(ಸೋನಾ)**
ಕನಿಷ್ಟ : 2019
ಗರಿಷ್ಟ : 3033

**ಒಣಕಡಲೆ**
ಕನಿಷ್ಟ : 4327
ಗರಿಷ್ಟ : 4327

**ಕೆಂಪು ತೊಗರಿ**
ಕನಿಷ್ಟ : 9506
ಗರಿಷ್ಟ : 9506

**ಶೇಂಗಾ (ಗುಂಗ್ರು)**
ಕನಿಷ್ಟ : 3535
ಗರಿಷ್ಟ : 4499

**ಸೂರ್ಯಕಾಂತಿ**
ಕನಿಷ್ಟ : 3815
ಗರಿಷ್ಟ : 3815

**ಈರುಳ್ಳಿ**
ಕನಿಷ್ಟ : 2100
ಗರಿಷ್ಟ : 4190

### ರಾಯಚೂರು ಜಿಲ್ಲೆ
ಇಂದಿನ ಹವಾಮಾನ ಮುನ್ಸೂಚನೆ



ಗರಿಷ್ಟ : 32 ಸೆಲ್ಸಿಯಸ್
ಕನಿಷ್ಟ : 23 ಸೆಲ್ಸಿಯಸ್

# ಕಾಂಗ್ರೆಸ್ ಶಾಸಕರಿಗೆ 50 ಕೋಟಿ ರೂ ಜಟಾಪಟಿ: ರಾಜ್ಯ ರಾಜಕೀಯದಲ್ಲಿ ಅಸ್ಥಿರತೆಯ ಮತ್ತೊಂದು ಅಧ್ಯಾಯ; ಸಿದ್ದರಾಮಯ್ಯ ಸರ್ಕಾರಕ್ಕಿಲ್ಲ ದೀರ್ಘಾಯುಷ್ಯ!

ಬೆಂಗಳೂರು ನ 16– ಸರ್ಕಾರ ಬೀಳಿಸುವ ಉದ್ದೇಶದಿಂದ 50 ಕಾಂಗ್ರೆಸ್ ಶಾಸಕರಿಗೆ ಬಿಜೆಪಿ 50 ಕೋಟಿ ರು. ಹಣದ ಆಮಿಷ ಒಡ್ಡಿದೆ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆರೋಪ ರಾಜ್ಯ ರಾಜಕೀಯದಲ್ಲಿ ಬಾರೀ ಸದ್ದು ಮಾಡುತ್ತಿದೆ. ಇದಕ್ಕೆ ಪೂರಕವೆಂಬಂತೆ ಡಿಸಿಎಂ ಡಿ.ಕೆ ಶಿವಕುಮಾರ್ ಕೂಡ ಸಿದ್ದರಾಮಯ್ಯ ಮಾತಿಗೆ ಬೆಂಬಲ ವ್ಯಕ್ತ ಪಡಿಸಿ ಶಾಸಕರಿಗೆ ಆಮಿಷ ಒಡ್ಡಿರುವುದು ನಿಜ ಎಂದು ಸಮರ್ಥಿಸಿಕೊಂಡಿದ್ದಾರೆ.

ಪ್ರಸ್ತುತ ಸರ್ಕಾರವು ಜನವರಿಗಿಂತ ಹೆಚ್ಚು ಕಾಲ ಉಳಿಯುವುದಿಲ್ಲ ಎಂಬ ಹಿರಿಯ ನಾಯಕರಾದ ಎಚ್‌ಡಿ ದೇವೇಗೌಡ ಮತ್ತು ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರ ಭವಿಷ್ಯವಾಣಿಯ ನಡುವೆ ಸಿದ್ದರಾಮಯ್ಯ





ಅವರ ಈ ಹೇಳಿಕೆ ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ. ಈ ಹೇಳಿಕೆಗಳು ಕೇವಲ ರಾಜಕೀಯ ನಿಲುವುಗಳೇ ಅಥವಾ ಕರ್ನಾಟಕ ಸರ್ಕಾರವನ್ನು ಉರುಳಿಸಲು ಸಂಘಟಿತ ಪ್ರಯತ್ನ ನಡೆಯುತ್ತಿದೆಯೇ? ಎಂಬ ಪ್ರಶ್ನೆ ಈಗ ಎದ್ದಿದೆ.

2019ರಲ್ಲಿ ಕುಮಾರಸ್ವಾಮಿ ಅವರ ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿದ್ದ ವೇಳೆ ನಡೆದ ರಾಜಕೀಯ ಬೆಳವಣಿಗೆಗಳಿಗೆ ಸದ್ಯದ ಪರಿಸ್ಥಿತಿ ಹೋಲಿಕೆಯಾಗುತ್ತಿದೆ. ಹಿರಿಯ ನಾಯಕರು ಶೀಘ್ರವೇ ಸರ್ಕಾರ ಪತನವಾಗುತ್ತದೆ ಎಂದು ಬಹಿರಂಗವಾಗಿ ಭವಿಷ್ಯ ನುಡಿದಿದ್ದಾರೆ. ದೇವೇಗೌಡ ಮತ್ತು ಕುಮಾರಸ್ವಾಮಿಯಂತಹ ಅನುಭವಿಗಳು ಸರ್ಕಾರದ ಆಯುಷ್ಯದ ಬಗ್ಗೆ ಮಾತನಾಡುತ್ತಿದ್ದಾರೆ ಎಂದರೇ ಮುಂದೆ ಬಹುದೊಡ್ಡ ಘಟನೆ ಸಂಭವಿಸಲಿದೆ ಎಂದು ರಾಜಕೀಯ ವಿಶ್ಲೇಷಕರು ಎಚ್ಚರಿಸುತ್ತಾರೆ. ಕೇಂದ್ರ ಸಚಿವ ವಿ ಸೋಮಣ್ಣ ಕೂಡ ರಾಜ್ಯ ಸರ್ಕಾರದ ಭವಿಷ್ಯದ ಅಸ್ಥಿರತೆಯ ಸುಳಿವು ನೀಡಿದ್ದು, ತೆರೆಮರೆಯಲ್ಲಿ ಪವರ್ ಪ್ಲೇ ನಡೆಯುತ್ತಿರುವ ಶಂಕೆ ವ್ಯಕ್ತವಾಗಿದೆ.

ಸರ್ಕಾರವನ್ನು ಉರುಳಿಸಲು ನಿಜವಾಗಿಯೂ ಸಂಚು ನಡೆಯುತ್ತಿದ್ದರೇ ಭಾರೀ ಪ್ರಮಾಣದ ಹಣ ಮತ್ತು ಪ್ರಭಾವವನ್ನು ಒಳಗೊಂಡಿರುತ್ತದೆ. ಶಾಸಕರನ್ನು ಓಲೈಸಲು, ಶಾಸಕರನ್ನು ರಹಸ್ಯ ಸ್ಥಳಗಳಲ್ಲಿ ಇರಿಸಲು 2,500 ಕೋಟಿ ರೂಪಾಯಿ ಚಲಾವಣೆಯಲ್ಲಿರಬಹುದು ಎಂಬ ಸುದ್ದಿ ಹರಡುತ್ತಿದೆ.

ಐದು ವರ್ಷಗಳ ಹಿಂದೆ ಮಹಾರಾಷ್ಟ್ರ ಸರ್ಕಾರವನ್ನು ಉರುಳಿಸುವ ಮೊದಲು ನಡೆದ ಪ್ರಮುಖ ಸಭೆಯಲ್ಲಿ ಉದ್ಯಮಿ ಗೌತಮ್ ಅದಾನಿ ಹಾಜ–ರಿದ್ದರು ಎಂದು ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಇತ್ತೀಚೆಗೆ ಬಹಿರಂಗಪಡಿಸಿದ್ದಾರೆ. ಕರ್ನಾಟಕವು ಇದೇ ರೀತಿಯ ಕ್ರಾಂತಿಗೆ ಕಾರಣವಾಗಬಹುದು, ಕೋಟ್ಯಂತರ ರೂಪಾಯಿ ಹಣ ಅದರ ರಾಜಕೀಯ ಸನ್ನಿವೇಶವನ್ನು ಬದಲಾಯಿಸಬಹುದು. "ಬಿಜೆಪಿಗೆ ಏನನ್ನ ಬೇಕಾದರೂ ಮಾಡುವ ಶಕ್ತಿ ಇದೆ. ಅವರು ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಇತರ ರಾಜ್ಯಗಳಲ್ಲಿ ಏನು ಮಾಡಿದರು ಎಂಬುದನ್ನು ನಾವು ನೋಡಿದ್ದೇವೆ ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ, "ನೀವು ನಿಮ್ಮ ಸ್ವಂತ ಶಾಸಕರ ಮೇಲೆ ನಂಬಿಕೆ ಕಳೆದುಕೊಂಡಿದ್ದೀರಿ ಮತ್ತು 50 ಕೋಟಿ ರೂಪಾಯಿ ಲಂಚದ ಆಧಾರರಹಿತ ಹೇಳಿಕೆಗಳನ್ನು ನೀಡುತ್ತಿರುವಂತೆ ತೋರುತ್ತಿದೆ. ಇಂತಹ ಹೇಳಿಕೆಯು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅವಮಾನಿಸುತ್ತದೆ ಎಂದಿದ್ದಾರೆ.

**ಉರುಳಿದ ಸರ್ಕಾರಗಳ ಇತಿಹಾಸ**

ಕಳೆದ ದಶಕದಲ್ಲಿಯೇ ಉತ್ತರಾಖಂಡ, ಅರುಣಾಚಲ ಪ್ರದೇಶ (2016), ಮಣಿಪುರ (2017), ಕರ್ನಾಟಕ, ಗೋವಾ, ಮಹಾರಾಷ್ಟ್ರ (2019), ಮತ್ತು ಮಧ್ಯಪ್ರದೇಶ (2020) ಸರ್ಕಾರಗಳ ಅಧಿಕಾರಾವಧಿಯಲ್ಲಿ ಹಲವು ಏರುಪೇರುಗಳು ಮತ್ತು ಪಲ್ಲಟಗಳನ್ನು ಕಂಡಿವೆ.

'ಹಣದ ಶಕ್ತಿಯ ಮೂಲಕ ನ್ಯಾಯಸಮ್ಮತವಾಗಿ ಚುನಾಯಿತ ಸರ್ಕಾರಗಳನ್ನು ಕಿತ್ತೊಗೆಯುವುದು ಸಾಮಾನ್ಯವಾಗುತ್ತಿರುವ ಈ ಯುಗದಲ್ಲಿ ನಾಗರಿಕ ಸಮಾಜ ಎಚ್ಚೆತ್ತುಕೊಂಡು ಈ ಬೆಳವಣಿಗೆಗಳಿಗೆ ಪೂರ್ವಭಾವಿಯಾಗಿ ಸ್ಪಂದಿಸುವುದು ಅತ್ಯಗತ್ಯ' ಎಂದು ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯದ ಪ್ರೊ.ಕಿರಣ ಗಾಜನೂರ ಹೇಳಿದ್ದಾರೆ. ಕರ್ನಾಟಕವು ರಾಜಕೀಯ ಅಸ್ಥಿರತೆಯ ಮತ್ತೊಂದು ಅಧ್ಯಾಯವನ್ನು ಎದುರು ನೋಡುತ್ತಿದೆಯೇ ಮತ್ತು ರಾಜಕೀಯ ಭವಿಷ್ಯವನ್ನು ಬದಲಾಯಿಸುವ ಅಪಾರ ಪ್ರಮಾಣದ ಹಣ ಎಲ್ಲಿಂದ ಹರಿದು ಬರುತ್ತಿದೆ ಎಂಬುದು ಎಲ್ಲರ ಪ್ರಶ್ನೆಯಾಗಿದೆ?

## ನ.18 : ಕನಕದಾಸ ಜಯಂತಿ ಅದ್ದೂರಿ ಆಚರಣೆ – ಬಸವಂತಪ್ಪ



ಜನವಾದಿ ವಾರ್ತೆ

ರಾಯಚೂರು ನ 16– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಹಾಗೂ ಜಿಲ್ಲಾ ಕುರುಬರ ಸಂಘದ ವತಿಯಿಂದ ನವೆಂಬರ್ 18 ರಂದು ಶ್ರೀ ಕನಕದಾಸರ 537ನೇ ಜಯಂತೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಲಾಗಿದೆ ಎಂದು ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಕೆ. ಬಸವಂತಪ್ಪ ಹೇಳಿದರು.

ಅವರಿಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ, ಅಂದು ಬೆಳಿಗ್ಗೆ 9 ಗಂಟೆಗೆ ಕನಕದಾಸರ ವೃತ್ತ ( ಗಂಜ್ ಸರ್ಕಲ್) ದಲ್ಲಿ ಮಠಾಧೀಶರು, ಜನಪ್ರತಿನಿಧಿಗಳು, ಅಧಿಕಾರಿಗಳು ಕನಕದಾಸರ ಪುತ್ಥಳಿಗೆ ವಿಶೇಷ ಪೂಜೆ ಸಲ್ಲಿಸಿ ಬೆಳಿಗ್ಗೆ 9–30 ರಿಂದ ಕನಕದಾಸರ ವೃತ್ತದಿಂದ ಸುಮಂಗಲೆಯರಿಂದ ಕುಂಭ, ಕಳಸ, ಡೊಳ್ಳು ಕುಣಿತ, ತಾಳ, ವಾದ್ಯ, ಜಾನಪದ ನೃತ್ಯ ಹಾಗೂ ಅನೇಕ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಚಂದ್ರಮೌಳೇಶ್ವರ ವೃತ್ತ, ಗಾಂಧಿ ಚೌಕ್ ಮೂಲಕ ಹೊರಟು ಮಧ್ಯಾಹ್ನ 12–30 ಗಂಟೆ ಸುಮಾರಿಗೆ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರ ತಲುಪುವುದು ಎಂದರು.

ಕಾರ್ಯಕ್ರಮದಲ್ಲಿ ಮಠಾಧೀಶರು, ಮಂತ್ರಿಗಳು, ಸಂಸದರು, ಮಾಜಿ ಸಂಸದರು, ಶಾಸಕರು, ಮಾಜಿ ಶಾಸಕರು, ವಿದ್ವಾಂಸರು,

☛4

## ಕೃಷಿ ವಿವಿಯ ಸಭಾಂಗಣದಲ್ಲಿ ಯುವಜನೋತ್ಸವ ಉದ್ಘಾಟನಾ ಸಮಾರಂಭಕ್ಕೆ ಸಚಿವರಿಂದ ಚಾಲನೆ
# ಯುವ ಪ್ರತಿಭಾವಂತರು ಜಿಲ್ಲೆಯ ಕೀರ್ತಿ ಪತಾಕೆ ಹಾರಿಸಿ –ಎನ್.ಎಸ್.ಭೋಸರಾಜು

ಜನವಾದಿ ವಾರ್ತೆ




ರಾಯಚೂರು ನ 16 – ಜಿಲ್ಲೆಯ ಯುವ ಪ್ರತಿಭಾವಂತ ಹಾಗೂ ಉದಯೋನ್ಮುಖ ಕಲಾವಿದರು ರಾಜ್ಯ ಮಟ್ಟದಲ್ಲಿ ವಿವಿಧ ಕಲಾ ಪ್ರಕಾರಗಳಲ್ಲಿ ಆಯ್ಕೆಯಾಗಿ ಜಿಲ್ಲೆಯ ಕೀರ್ತಿ ಪತಾಕೆ ಹಾರಿಸಬೇಕೆಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್.ಭೋಸರಾಜು ಅವರು ಯುವಜನಾಂಗಕ್ಕೆ ಕರೆ ನೀಡಿದರು.

ಅವರು ನ.16ರ ಶನಿವಾರ ದಂದು ನಗರದ ಕೃಷಿ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ರಾಯಚೂರು, ನೆಹರು ಯುವ ಕೇಂದ್ರ ಹಾಗೂ ಯುವ ಸಂಘಗಳ ಒಕ್ಕೂಟ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ 2024–25ನೇ ಸಾಲಿನ ಜಿಲ್ಲಾ ಮಟ್ಟದ ಯುವಜನೋತ್ಸವ ಉದ್ಘಾಟನಾ ಸಮಾರಂಭಕ್ಕೆ ಚಾಲನೆ ನೀಡಿ, ಮಾತನಾಡಿದರು.

ಯುವಜನೋತ್ಸವ ಯುವಜನರ ಪ್ರತಿಭೆ ಅನಾವರಣಕ್ಕೆ ಉತ್ತಮ ವೇದಿಕೆಯಾಗಿದ್ದು, ಇಂತಹ ಉತ್ಸವ, ಸ್ಪರ್ಧೆಗಳಿಂದ ಯುವಜನರು ತಮ್ಮಲ್ಲಿರುವ ಪ್ರತಿಭೆ, ಕೌಶಲಗಳನ್ನು ಪ್ರದರ್ಶಿಸಲು ಸಹಕಾರಿಯಾಗಿದೆ. ಯುವಕರು ಈ ವೇದಿಕೆಯ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಗ್ರಾಮೀಣ, ನಗರ ಪ್ರದೇಶದ ಯುವಜನರಲ್ಲಿನ ಪ್ರತಿಭೆ ಅಸಾಮಾನ್ಯವಾಗಿದೆ.

☛4

## ಇ- ಖಾತಾ ಗೊಂದಲದಲ್ಲಿದ್ದ ಆಸ್ತಿ ಮಾಲೀಕರಿಗೆ ಗುಡ್ ನ್ಯೂಸ್

ಬೆಂಗಳೂರು ನ 16– ಆಸ್ತಿ ಮಾಲೀಕರು ಇ– ಖಾತಾ ಪಡೆಯುವ ಮುನ್ನ ತಮ್ಮ ಖಾತೆಯಲ್ಲಿನ ತಪ್ಪು ಸರಿಪಡಿಸಿಕೊಳ್ಳಲು ನವೆಂಬರ್ 18ರಿಂದ ಅವಕಾಶ ನೀಡಲಾಗುವುದು ಎಂದು ಬಿಬಿಎಂಪಿ ಕಂದಾಯ ವಿಭಾಗದ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿನ 22 ಲಕ್ಷ ಆಸ್ತಿಗಳಿಗೆ ಈಗಾಗಲೇ ಕರಡು ಇ– ಖಾತಾ ಸಿದ್ಧಪಡಿಸಲಾಗಿದೆ.

ಕೆಲವು ಖಾತೆಯಲ್ಲಿ ವಿಸ್ತೀರ್ಣ, ಹೆಸರು ಸೇರಿ ಇತರೆ ಅಂಶಗಳು ತಪ್ಪಾಗಿ ನಮೂದಾದ ಬಗ್ಗೆ ದೂರು ಸಲ್ಲಿಕೆಯಾದ ಹಿನ್ನೆಲೆಯಲ್ಲಿ ತಪ್ಪು ಮಾಹಿತಿಯನ್ನು ಸೂಕ್ತ ದಾಖಲೆ ನೀಡಿ ಸರಿಪಡಿಸಲು ಅವಕಾಶ ಕಲ್ಪಿಸಲಾಗುತ್ತಿದೆ. ಆಸ್ತಿ ಮಾಲೀಕರು ನಿಗದಿತ ವೆಬ್ಸೈಟ್ ನಲ್ಲಿ ಸ್ವಯಂ ತಾವೇ ತಪ್ಪು ಸರಿಪಡಿಸಿಕೊಳ್ಳಬಹುದಾಗಿದೆ ಎಂ ನಗರದಲ್ಲಿ 22 ಲಕ್ಷ ಆಸ್ತಿಗಳಲ್ಲಿ ಶೇಕಡ 90ರಷ್ಟು ಆಸ್ತಿಗಳ ಪರಿಶೀಲನೆ ನಡೆಸಿರಲಿಲ್ಲ. ಹೀಗಾಗಿ ಎಲ್ಲಾ ಆಸ್ತಿಗಳನ್ನು ಜೆಪಿಎಸ್ ಮ್ಯಾಪಿಂಗ್ ಮಾಡಲಾಗುತ್ತಿದೆ. ಎಲ್ಲಾ ಆಸ್ತಿಗಳ ದಾಖಲೆಗಳನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ. ದು ತಿಳಿಸಿದ್ದಾರೆ.

## ಯಾದಗಿರಿ: ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಂಸದ ಕುಮಾರ ನಾಯಕ ಸಭೆ
# ಕೃಷಿ ಸಬ್ಸಿಡಿ ಯೋಜನೆಗಳನ್ನು ರೈತರಿಗೆ ತಲುಪಿಸಿ– ಕುಮಾರ ನಾಯಕ

ಜನವಾದಿ ವಾರ್ತೆ

ಯಾದಗಿರಿ ನ 16– ರೈತರು ಕೇವಲ ಕೃಷಿಗೆ ಸೀಮಿತವಾಗದೆ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಕ್ಷೇತ್ರಗಳಾದ ಮೀನುಗಾರಿಕೆ, ತೋಟಗಾರಿಕೆ, ಪಶುಸಂಗೋಪನೆ, ಹೈನುಗಾರಿಕೆ, ಕೋಳಿ ಮತ್ತು ಹಾಲು ಉತ್ಪಾದನೆಯಲ್ಲಿ ಪ್ರಯತ್ನಿಸಬೇಕು. ಇದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಲ್ಲಿ ಸಬ್ಸಿಡಿ ಸಾಲ ಸೌಲಭ್ಯಗಳು ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿ ರೈತರ ಆರ್ಥಿಕ ಬಲವರ್ಧನೆಗೆ ಪ್ರಯತ್ನಿಸಬೇಕು ಎಂದು ರಾಯಚೂರು ಲೋಕಸಭಾ ಕ್ಷೇತ್ರದ ಸಂಸದರಾದ ಜಿ ಕುಮಾರ್ ನಾಯಕ ಅವರು ತಿಳಿಸಿದರು.

ಯಾದಗಿರಿಯಲ್ಲಿ ಜಿಲ್ಲಾಮಟ್ಟದ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ



ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿ, ಈ ಪ್ರದೇಶದ ಪರಿಸರ ಹಾಗೂ ಕೃಷಿ ಸೌಲಭ್ಯಗಳಿಗೆ ಅನುಗುಣವಾಗಿ ತೊಗರಿ, ಕಡಲೆ, ಭತ್ತ, ಜೋಳ, ಹತ್ತಿ ಬೆಳೆಗಳನ್ನು ಬೆಳೆಯುತ್ತಿದ್ದೇವೆ. ಈ ಕೃಷಿ ಮತ್ತು ಕೃಷಿ ಸಂಬಂಧಿತ ಕ್ಷೇತ್ರಗಳ ಅನುಕೂಲಗಳನ್ನು ರೈತರಿಗೆ ಮಾಹಿತಿ ನೀಡಬೇಕು.

ಕೃಷಿ' ದೇಶದ ಆರ್ಥಿಕತೆ ಹಾಗೂ ನಮ್ಮ ಆಹಾರ ಮತ್ತು ಪೌಷ್ಟಿಕಾಂಶದ ಅವಶ್ಯಕತೆಗಳನ್ನು ಪೂರೈಸುತ್ತದೆ. ಹಾಗಾಗಿ ನವೆಲ್ಲರು ದೇಶದ ಬೆನ್ನೆಲುಬಾದ ರೈತರ ಸಂರಕ್ಷಣೆ ಮೂಲಕ ಕೃಷಿ ಹೊಸ ಬೆಳವಣಿಗೆಗೆ, ಆರ್ಥಿಕ ಸಬಲೀಕರಣಕ್ಕೆ ಪ್ರೋತ್ಸಾಹಿಸಬೇಕಾಗಿದೆ.

ಜಿಲ್ಲಾಡಳಿತ ರೈತರಿಗಾಗಿ ಮಿಶ್ರ ಬೇಳೆ ಪದ್ಧತಿ, ತೋಟಗಾರಿಕೆ, ಸಾಕಾಣಿಕೆ ಸೇರಿ ಕೃಷಿ ಸಂಬಂದಿತ ಕ್ಷೇತ್ರಗಳ ಬಗ್ಗೆ ಮಾಹಿತಿಯೊಂದಿಗೆ ಜಾಗೃತಿ ನೀಡಬೇಕು. ಸರ್ಕಾರ ನೀಡುವ ಸಬ್ಸಿಡಿ ಯೋಜನೆಗಳನ್ನು ರೈತರು ಸದುಪಯೋಗ ಪಡೆದುಕೊಳ್ಳಬೇಕು. ಮಿಶ್ರ ಬೆಳೆ ಹಾಗೂ ಕೃಷಿ ಸಂಬಂದಿತ ಕ್ಷೇತ್ರಗಳಲ್ಲಿ ವ್ಯವಸಾಯ ಮಾಡುತ್ತಿರುವ ರೈತರನ್ನು ಗುರಿತಿಸಿ ಹೆಚ್ಚಿನ ಮಾಹಿತಿ ನೀಡಿ ಸರ್ಕಾರದ ಯೋಜನೆಗಳ ಬಗ್ಗೆ ತಿಳಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

☛4

## ಬೆಳೆ ಹಾನಿ ಪ್ರದೇಶಕ್ಕೆ ಮಾಜಿ ಸಚಿವ ನಾಡಗೌಡ ಭೇಟಿ

ಜನವಾದಿ ವಾರ್ತೆ



ಸಿಂಧನೂರು ನ 16 – ಅಕಾಲಿಕ ಮಳೆಯಿಂದ ಹಾನಿಗೊಳಗಾದ ತಾಲೂಕಿನ ವಿವಿಧ ಹಳ್ಳಿಗಳಿಗೆ ಮಾಜಿ ಸಚಿವ ವೆಂಕಟರಾವ ನಾಡಗೌಡ ಭೇಟಿ ನೀಡಿ ಪರಿಶೀಲನೆ ಮಾಡಿ, ರೈತರೊಂದಿಗೆ ಚರ್ಚಿಸಿದರು.

ಶನಿವಾರ ತಾಲ್ಲೂಕಿನ ಗೊರೇಬಾಳ, ಸಾಲಗುಂದಾ, ಜಾಲಿಹಾಳ ಸೇರಿದಂತೆ ವಿವಿಧ ಹೋಬಳಿಯ ಗ್ರಾಮಗಳಲ್ಲಿ ಬೆಳೆಹಾನಿಯಾದ ಪ್ರದೇಶಗಳಿಗೆ ಭೇಟಿ ನೀಡಿ, ಬೆಳೆಹಾನಿಯ ಬಗ್ಗೆ ಸ್ಥಳದಲ್ಲಿದ್ದ ರೈತರಿಂದ ಮಾಹಿತಿ ಪಡೆದರು. ಸಿಂಧನೂರು ಕ್ಷೇತ್ರದಲ್ಲಿ ಎರಡು ದಿನಗಳ ಕಾಲ ಸುರಿದ ಮಳೆಯಿಂದಾಗಿ ಅಪಾರ ಪ್ರಮಾಣದ ಭತ್ತದ ಬೆಳೆ ನೆಲಸಮವಾಗಿ ಹಾನಿಯಾಗಿದೆ. ಅಕಾಲಿಕ ಮಳೆಯಿಂದಾಗಿ ರೈತರಿಗೆ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ. ಕಟಾವು ಹಂತದಲ್ಲಿ ಮಳೆ ಬಂದ ಹಿನ್ನಲೆಯಲ್ಲಿ ರೈತರು ಆರ್ಥಿಕ ಸಂಕಷ್ಟಕ್ಕೆ ಗು–ರಿಯಾಗಿದ್ದಾರೆ. ಶಾಸಕರು ಹಾಗೂ ಸರ್ಕಾರ ಕೂಡಲೇ ಸರ್ವೆ ಮಾಡಿ, ಪರಿಹಾರ ನೀಡುವ ಮೂಲಕ ರೈತರ ನೆರವಿಗೆ ಧಾವಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ವೆಂಕೋಬ ಕಲ್ಲೂರು, ಶರಣೇಗೌಡ ಗೊರೇಬಾಳ, ಬಸನಗೌಡ ಆರ್., ಸಣ್ಣ ಶಿವನಗೌಡ, ಗುರುರಾಜ್, ಶರಣೇಗೌಡ ಜಂಬನೂರು, ಧರ್ಮನಗೌಡ ಮಾಲಿಪಾಟೀಲ್, ಮಲ್ಲನಗೌಡ ಬೆಳಗುರ್ಕಿ ಸೇರಿದಂತೆ ಅನೇಕರು ಇದ್ದರು.

## ಬಹುದಿನಗಳಿಂದ ನೆನೆಗುದಿಗೆ ಬಿದ್ದ ಮುಖ್ಯ ರಸ್ತೆಯ ಚರಂಡಿ ತೆರವು ಕಾರ್ಯಾಚರಣೆ

ಜನವಾದಿ ವಾರ್ತೆ

ಗಬ್ಬೂರು ನ 16– ರಾಯಚೂರು ದೇವದುರ್ಗ ರಾಜ್ಯ ಹೆದ್ದಾರಿಯಲ್ಲಿ ಬರುವ ಗಬ್ಬೂರು ಗ್ರಾಮದ ಮೂಲಕ ಹಾದು ಹೋಗಿರುವ ಮುಖ್ಯ ರಸ್ತೆಯ ಮೇಲೆ ಚರಂಡಿ ನೀರು ನಿಂತು ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ತಿರುಗಾಡಲು ತುಂಬಾ ತೊಂದರೆಯಾಗಿತ್ತು ಮುಖ್ಯ ರಸ್ತೆಯಿಂದ ವಿವಿಧ ಗ್ರಾಮಗಳಿಗೆ ಹೋಗುವ ಪ್ರಯಾಣಿಕರಿಗೆ ರಸ್ತೆಯ ಮೇಲೆ ನಿಂತಿರುವ ಚರಂಡಿ ನೀರಿನ ದುರ್ನಾತದಿಂದ ಮೂಗು ಮುಚ್ಚಿಕೊಂಡು ಹೋಗುವಂತ ಪರಿಸ್ಥಿತಿಯಿತ್ತು.ಪ್ರತಿ ದಿನಾಲು ಇದೇ ರಸ್ತೆಯ ಮೂಲಕ ರಾಯಚೂರಿನಿಂದ ದೇವದುರ್ಗಕ್ಕೆ ಹೋಗುವ ವಿವಿಧ ಇಲಾಖೆಯ ಅಧಿಕಾರಿಗಳು ಇದೇ



ರಸ್ತೆಯ ಮೂಲಕ ಓಡಾಡುತ್ತಿದ್ದರು ಇದರ ಬಗ್ಗೆ ಯಾರೂ ಗಂಭೀರವಾಗಿ ಪರಿಗಣಿಸಿಲ್ಲ, ಈ ರಸ್ತೆಯ ಮೂಲಕ ತಿರುಗಾಡುವ ಪ್ರತಿ ನಾಗರಿಕರು ಗ್ರಾಮ ಪಂಚಾಯತ್ ಹಾಗೂ ತಾಲೂಕ ಆಡಳಿತಕ್ಕೆ ಹಿಡಿ ಶಾಪ ಹಾಕುತ್ತಿದ್ದರು. ಇದಕ್ಕೆಲ್ಲಾ ಕಾರಣ ರಸ್ತೆಯ ಎರಡು ಬದಿ ಇರುವ ಚರಂಡಿಯ ಮೇಲೆ ಅನಧಿಕೃತ ಅಂಗಡಿ ಮುಗ್ಗಟ್ಟುಗಳನ್ನು ಹಾಕಿಕೊಂಡು ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಚರಂಡಿಯನ್ನು ಮುಚ್ಚಿ ಹಾಕಿರುವುದೇ ಸಮಸ್ಯೆಗೆ ಕಾರಣವಾಗಿತ್ತು. ಇದರ ಬಗ್ಗೆ ಹತ್ತಾರು ವರ್ಷಗಳಿಂದ ಗ್ರಾಮ ಪಂಚಾಯಿತಿಯವರಿಗೆ ತಾಲೂಕ ಆಡಳಿತಕ್ಕೆ ಮನವಿ ಮಾಡಿದ್ದರು ಸಮಸ್ಯೆ ಬಗೆ ಹರಿಯದೆ ನೆನೆಗುದಿಗೆ ಬಿದ್ದಿತ್ತು,

☛4

## ಶಾಸಕದ್ವಯರಿಗೂ ತಟ್ಟಿದ ವಕ್ಫ್ ಬಿಸಿ
# ಸ್ವತಃ ಜಮೀನಿನ ಪಹಣಿಯಲ್ಲಿ ವಕ್ಫ್ ಹೆಸರು ನಮೂದು

ಜನವಾದಿ ವಾರ್ತೆ

ಲಿಂಗಸೂಗೂರು ನ 16– ಇಷ್ಟು ದಿನ ರೈತರು, ಮಠ ಮಾನ್ಯಗಳಿಗೆ ತಟ್ಟಿದ್ದ ವಕ್ಫ್ ಬಿಸಿ ಈಗ ಶಾಸಕ ಹಾಗೂ ವಿಧಾನ ಪರಿಷತ್ ಸದಸ್ಯ–ರಿಗೂ ತಟ್ಟಿದೆ. ಲಿಂಗಸುಗೂರು ಶಾಸಕ ಮಾನಪ್ಪ ವಜ್ಜಲ್ ಹಾಗೂ ಲಿಂಗಸೂಗೂರು ಮೂಲದವರಾದ ಕಾಂಗ್ರೆಸ್ ಎಂಎಲ್‌ಸಿ ಶರಣಗೌಡ ಬಯ್ಯಾಪೂರಗೆ ಬಿಸಿ ತಟ್ಟಿದ್ದು ಈ ಶಾಸಕದ್ವಯರ ಸ್ವತಃ ಜಮೀನಿನ ಪಹಣಿಯಲ್ಲಿ ವಕ್ಫ್ ಆಸ್ತಿ ಅಂತ ನಮೂದಾಗಿದೆ.

ಮಾನಪ್ಪ ವಜ್ಜಲ್ ಪುತ್ರ ಆಂಜನೇಯ ವಜ್ಜಲ್‌ಗೆ ಸೇರಿದ





ಲಿಂಗಸುಗೂರಿನ ಮುದಗಲ್ ಸೀಮೆಯ ಸ.ನಂ 242/7 ರ 1 ಎಕರೆ ಜಮೀನಿನ ಪಹಣಿಯಲ್ಲಿ ವಕ್ಫ್ ಆಸ್ತಿ ನಮೂದಾಗಿದೆ. 2016–17 ರಲ್ಲಿ ಖರೀದಿಸಿದ್ದ ಜಮೀನಿನಲ್ಲಿ ವಕ್ಫ್ ಹೆಸರು ನಮೂದಾಗಿದ್ದು, ಸರಿಪಡಿಸುವಂತೆ ಶಾಸಕ ವಜ್ಜಲ್ ಈಗಾಗಲೇ ತಹಶೀಲ್ದಾರ್ ಹಾಗೂ ಲಿಂಗಸುಗೂರು ಎಸಿ ಗೆ ಮಾಹಿತಿ ನೀಡಿದ್ದಾರೆ.

ವಿಧಾನ ಪರಿಷತ್ ಸದಸ್ಯ ಶರಣಗೌಡ ಬಯ್ಯಾಪೂರ ಹೆಸ–ರಿನ ಜಮೀನನ ಪಹಣಿಯಲ್ಲೂ ವಕ್ಫ್ ಹೆಸರು ಕಾಣಿಸಿಕೊಂಡಿದೆ. ಸರ್ವೆ ನಂ. 242/4 ರ ಒಂದು ಎಕರೆ ಜಮೀನು 2007–08 ರಲ್ಲಿ ಖರೀದಿಸಿದ್ದ ಬಯ್ಯಾಪೂರ ಈಗಾಗಲೇ ಜಮೀನು ಎನ್‌ಎ ಮಾಡಿಸಿದ್ದಾರೆ. ಜೊತೆಗೆ ಅದೇ ಸ.ನಂ. ನಲ್ಲಿರುವ ಲಿಂಗಸುಗೂರಿನ ಅಂಕಲಿಮಠದ ಶ್ರೀಗಳಿಗೂ ಬಿಸಿ ತಟ್ಟಿದ್ದು, ಸ.ನಂ 242/8 ರ ಫಕೀರಸ್ವಾಮಿಗೆ ಸೇರಿದ 19 ಗುಂಟೆ ಜಮೀನಿನಲ್ಲೂ ವಕ್ಫ್ ಹೆಸರು ಕಾಣಿಸಿಕೊಂಡಿದೆ. ಮುದಗಲ್‌ನ ಸ.ನಂ 242 ರ ಒಟ್ಟು 30 ಎಕರೆ ಜಮೀನಿನ ಪಹಣಿಗಳಲ್ಲಿ ವಕ್ಫ್ ಹೆಸರು ನಮೂದಾಗಿದೆ.

# 71 ನೇ ಅಖಿಲ ಭಾರತ ಸಹಕಾರ ಸಪ್ತಾಹ – 2024

ಜನವಾದಿ ವಾರ್ತೆ

ಮಾನ್ವಿ ನ 16– ಪಟ್ಟಣದ ಪಿಕಾರ್ಡ ಬ್ಯಾಂಕಿನ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ಹಾಗೂ ಸಹಕಾರ ಇಲಾಖೆ, ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸಂಯುಕ್ತಾಶ್ರಯದಲ್ಲಿ ನಡೆದ 71 ನೇ ಅಖಿಲ ಭಾರತ ಸಹಕಾರ ಸಪ್ತಾಹ – 2024 ಕಾರ್ಯಕ್ರಮವನ್ನು ಕಾಡಾ ಇಲಾಖೆಯ ನಿವೃತ್ತ ಅಧಿಕಾರಿ ಲಕ್ಷ್ಮಣ ಉದ್ಘಾಟಿಸಿ ಮಾತನಾಡಿ ದೇಶದ ಸ್ವತಂತ್ರ್ಯದ ನಂತರ ಪ್ರಥಮ ಪ್ರಧಾನಿಗಳಾದ ಪಂಡಿತ ಜವಹಾರಲಾಲ್ ನೆಹರು ರವರು ತಮ್ಮ ಪಂಚಾವಾರ್ಷಿಕ ಯೋಜನೆಗಳಲ್ಲಿ ಸಹಕಾರಿ ಕ್ಷೇತ್ರಕ್ಕೆ ಹೆಚ್ಚಿನ ಮಹಾತ್ವವನ್ನು ನೀಡಿದರಿಂದ ಪ್ರತಿ ವರ್ಷ ನ.14 ರಿಂದ 20ರವರೆಗೆ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ. ಈ ವರ್ಷದ ಧ್ಯೇಯ ವಾಕ್ಯ ವಿಕಸಿತ ಭಾರತ ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಎನುವುದಾಗಿದ್ದು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸಹಕಾರಿ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ರಾಜ್ಯದಲ್ಲಿ ಸಹಕಾರಿ ಕ್ಷೇತ್ರವನ್ನು ಪರಿಚಯಿಸಿದವರು ಸಹಕಾರಿ ಪಿತಾಮಹ ಶ್ರೀ ಸಿದ್ದನಗೌಡ ಸಣ್ಣ ರಾಮನಗೌಡ ಪಾಟೀಲ್ ರವರು ಇಂದು ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿ ಸಹಕಾರಿ ಕ್ಷೇತ್ರ ವ್ಯಾಪಿಸಿಕೊಂಡಿದ್ದೆ ಗ್ರಾಮೀಣ ಭಾಗದ ಮಹಿಳೆಯರಿಂದ ಹಿಡಿದು ಎಲ್ಲಾ ಕ್ಷೇತ್ರಗಳ ಜನರು ಪರಸ್ಪರ ಸಹಕಾರದಿಂದ ಇಂದು ಆರ್ಥಿಕ ಲಾಭವನ್ನು ಪಡೆದು ಅಭಿವೃದ್ದಿಯನ್ನು ಹೊಂದುತ್ತಿದ್ದಾರೆ. ಸಹಕಾರಿ ಸಂಸ್ಥೆಗಳಿಂದ ರೈತರಿಗೆ ಹೆಚ್ಚಿನ ಆರ್ಥಿಕ ಲಾಭ ದೊರೆಯುತ್ತಿದೆ ಹಾಗೂ ಕೃಷಿ ಕ್ಷೇತ್ರ ಅಭಿವೃದ್ಧಿ ಹೊಂದುವುದಕ್ಕೆ ಕಾರಣವಾಗಿದೆ. ಎಂದು ತಿಳಿಸಿದರು.



ಉದ್ಯಮಶೀಲತೆ,ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಎನ್ನುವ ವಿಷಯ ಕುರಿತು ಕ.ರಾ.ಪ್ರ.ಶಾ.ಶಿ.ಸಂಘದ ತಾ.ಅಧ್ಯಕ್ಷರಾದ ಸಂಗಮೇಶ ಮುಧೋಳ್ ವಿಶೇಷ ಉಪನ್ಯಾಸವನ್ನು ನೀಡಿ ಮಾತನಾಡಿ ಸಹಕಾರಿ ಕ್ಷೇತ್ರವು ಉಳಿಸಿದ ಹಣ ಗಳಿಸಿದ ಹಣಕ್ಕೆ ಸಮ ಎನ್ನುವ ತತ್ವವನ್ನು ನಮಗೆ ತಿಳಿಸುತ್ತದೆ. ಸಹಕಾ–ರಿಯ ಸದಸ್ಯರಲ್ಲಿ ಪರಸ್ಪರ ಸಹಕಾರ ಮನೋಭಾವನೆ,ಪ್ರಮಾಣಿಕತೆ ಹಾಗೂ ಸದಸ್ಯರು ಸಹಕಾರಿಯಿಂದ ಪಡೆದ ಆರ್ಥಿಕ ಸೌಲಭ್ಯವನ್ನು ಸಕಾಲದಲ್ಲಿ ಮರುಪಾವತಿ ಮಾಡಿದಲ್ಲಿ ಮಾತ್ರ ಸಹಕಾರಿ ಸಂಸ್ಥೆಗಳು ಅಭಿವೃದ್ಧಿ ಹೊಂದುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತಾ.ಸಹಕಾರಿ ಅಭಿವೃದ್ಧಿ ಅಧಿಕಾರಿ ಬಾಬು ಶರಣಬಸವ ಮಾನೆ, ಸಹಕಾರಿ ಅಧಿಕಾರಿ ವಿನೋದ್, ಸಹಕಾರಿ ಶಿಕ್ಷಣಾಧಿಕಾರಿ ಅಶ್ವಿನಿ, ಪಿಕಾರ್ಡ ಬ್ಯಾಂಕ್ ಲೆಕ್ಕಾಧಿಕಾರಿ ಮನೋಹರ್, ನಿಕಟಪೂರ್ವ ತಾ.ಸರಕಾರಿ ನೌಕರರ ಸಂಘದ ಅಧ್ಯಕ್ಷರಾದ ಬಸವರಾಜ, ಟಿ.ಎ.ಪಿ.ಸಿ.ಎಂ.ಸಿ. ವ್ಯವಸ್ಥಾಪಕರಾದ ಸಿದ್ದರಾಮೇಶ್, ಅಶ್ವಿನಿ ಪ್ರಸ್ತಾವಿಕ ನುಡಿದರು ಮಂಜುಳಾ ನಿರೂಪಿಸಿದರು

ಸೇರಿದಂತೆ ಸಹಕಾರಿ ಇಲಾಖೆಯ ಸಿಬ್ಬಂದಿಗಳು,ಹಾಗೂ ತಾಲೂಕಿನ ವಿವಿಧ ರೀತಿಯ ಸಹಕಾರಿ ಸಂಘಗಳ ವ್ಯವಸ್ಥಾಪಕರು,ಸಿಬ್ಬಂದಿಗಳು ಇದ್ದರು.

# ನ17ಕ್ಕೆ ಮಲ್ಲಟದಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣ

ಜನವಾದಿ ವಾರ್ತೆ

ಸಿರವಾರ ನ 16– ತಾಲೂಕಿನ ಮಲ್ಲಟ ಗ್ರಾಮದಲ್ಲಿ ನ 17 ಭಾನುವಾರ ಡಾ; ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ಅನಾವರಣ ಕಾರ್ಯಕ್ರಮವು ಹಮ್ಮಿಕೊಳ್ಳಲಾಗಿದೆ ಎಂದು ದಲಿತ ಮುಖಂಡ ಶಿವಪ್ಪ ಗೊಲದಿನ್ನಿ ಹೇಳಿದ್ದಾರೆ.

ಶುಕ್ರವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಲ್ಲಟ ಗ್ರಾಮದಲ್ಲಿ ಮಾದಿಗ ಮೀಸಲಾತಿ ಹೋರಾಟ ಸಮಿತಿ ಹಾಗೂ ದಲಿತ ಸಂಘರ್ಷ ಸಮಿತಿ (ಡಾ;ಎನ್. ಮೂರ್ತಿ ಬಣ) ಸಂಘಟನೆಗಳ ಸಹಯೋಗದೊಂದಿಗೆ ನ17 ಭಾನುವಾರ ರಂದು ಡಾ; ಬಿ.ಆರ್. ಅಂಬೇಡ್ಕರ್ ಪ್ರತಿಮೆ ಲೋಕಾರ್ಪಣೆ ಮಾಡಲಾಗುವುದು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ಸಿದ್ಧಬಸವ ಕಬೀರ ಸ್ವಾಮೀಜಿ ಚಿಗರಳ್ಳಿ, ಅಂಬೇಡ್ಕರ್ ಪ್ರತಿಮೆ ಲೋಕಾರ್ಪಣೆಯನ್ನು ಶಾಸಕ



ಜಿ.ಹಂಪಯ್ಯ ನಾಯಕ ಮಾಡಲಿದ್ದು, ಕಾರ್ಯಕ್ರಮದ ಉದ್ಘಾಟನೆಯನ್ನು ಸಚಿವ ಎನ್.ಎಸ್. ಭೋಸರಾಜು ಮಾಡಲಿದ್ದಾರೆ.

ಲೋಕಸಭಾ ಸದಸ್ಯ ಜಿ.ಕುಮಾರ ನಾಯಕ, ಮಾಜಿ ಸಚಿವ ಹನುಮಂತಪ್ಪ ಆಲ್ಕೋಡ್, ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ, ಕೆ.ಶಿವನಗೌಡ ನಾಯಕ, ಬಿ.ವಿ.ನಾಯಕ, ಗಂಗಾಧರ ನಾಯಕ, ಸೇರಿದಂತೆ ಇತರೆ ರಾಜ–ಕೀಯ ನಾಯಕರು, ಸಮಾಜದ ಚಿಂತಕ, ಪ್ರಗತಿಪರ ಚಿಂತಕರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಎಲ್ಲಾ ಸಮಾಜದ ಮುಖಂಡರು, ಯುವಕರು, ಮಹಿಳೆಯರು, ಅಂಬೇಡ್ಕರ್ ಅನುಯಾಯಿಗಳು ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದರು.

ಹುಲಿಗೆಪ್ಪ ಕರಿಬಿಲ್ಕರ್, ಎಂ.ಮನೋಹರ ಸಿರವಾರ, ಹುಲಿಗೆಪ್ಪ ಸೈದಾಪೂರು, ಮುತ್ತಣ್ಣ ಚಾಗಬಾವಿ, ಚನ್ನಪ್ಪ ಬೂದಿನಾಳ, ಹರಳಪ್ಪ ಕವಿತಾಳ, ಮಲ್ಲಪ್ಪ ಬಂಡಾ–ರಿ,ಚಂದ್ರಪ್ಪ ಕವಿತಾಳ, ಜಂಬಣ್ಣ ಯತಗಲ್, ರಮೇಶ ಬಂಡಾರಿ ಮಲ್ಲಟ, ಮೌನೇಶ ದೇವತಗಲ್, ವೀರೇಶ ಹರವಿ, ಯಲ್ಲಪ್ಪ ನವಲಕಲ್ ಸೇರಿದಂತೆ ಅನೇಕರು ಇದ್ದರು.

# ಸೇವಾ ನಿವೃತ್ತಿಯ ನಿಮಿತ್ಯ ಬೀಳ್ಕೊಡುಗೆ ಸಮಾರಂಭ

ಜನವಾದಿ ವಾರ್ತೆ

ಮುದುಗಲ್ ನ 16– ಪಟ್ಟಣದ ಸಮೀಪದ ಮೆದಿಕಿನಾಳ ಕ್ಲಸ್ಟರ್ನ ಬೈಲಗುಡ್ಡ ಹಿರಿಯ ಪ್ರಾಥಮಿಕ ಶಾಲಾ ವತಿಯಿಂದ ಶ್ರೀ ಶರಣಪ್ಪ ಹೊಸಮನಿ ಅವರಿಗೆ ಸೇವಾ ನಿವೃತ್ತಿಯ ನಿಮಿತ್ಯ ಸನ್ಮಾನಿಸಿ ಬಿಳ್ಕೊಡಲಾಯಿತು.

ಈ ಸಂದರ್ಭದಲ್ಲಿ ಮಸ್ಕಿ ವಲಯದ ಶಿಕ್ಷಣ ಸಂಯೋಜಕರಾದ ಶ್ರೀರಾಮಚಂದ್ರ ನಿರಾಳೆ ಮಾತನಾಡಿ ಸರ್ಕಾರಿ ಶಾಲೆ ಮಕ್ಕಳು ನಮ್ಮ ಮಕ್ಕಳೆಂದು ಭಾವಿಸಿ ಉತ್ತಮ ಶಿಕ್ಷಣ ನೀಡಬೇಕು. ನಾವು ಬಿತ್ತಿದ ಬೀಜನೆ ನಮಗೆ ಫಲವಾಗಿ ದೊರೆಯುತ್ತದೆ. ಶಿಕ್ಷಕರು ಸದಾ ನಿಷ್ಠೆಯಿಂದ ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು.

ಬಿ ಆರ್ ಪಿ ಯವರಾದ ಶ್ರೀ ಮಾಳಪ್ಪ ನಂದ್ಯಾಳ್ ಮಾತನಾಡಿ ಶಿಕ್ಷಕರು ಇಲಾಖೆಯ ನಿಯಮದಡಿ



ಕಾರ್ಯ ನಿರ್ವಹಿಸಬೇಕು. ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾದದ್ದು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಲೆಖಾನ್ ಸಿ ಆರ್ ಪಿ ಶರಣಪ್ಪ ಮ್ಯಾದರ್, ಮುಖ್ಯ ಗುರುಗಳಾದ ಬಸವರಾಜ ಮೇತ್ರಿ, ಎಸ್ ಡಿ ಎಂ ಸಿ ಅಧ್ಯಕ್ಷರಾದ ಯಮನೂರಪ್ಪ, ಸಹ ಶಿಕ್ಷಕರಾದ ಬಸವರಾಜ, ಮಹಿಮೂದಾಬೇಗಂ, ಅತಿಥಿ ಶಿಕ್ಷಕರಾದ ಅಂಬಿಕಾ, ದುರ್ಗೇಶ್ ಉಪಸ್ಥಿತರಿದ್ದರು.

# ಉತ್ತಮ ಗುಣಮಟ್ಟದ ಶೂ ಮತ್ತು ಸಾಕ್ಸ್ ವಿತರಣೆ ಸುಳ್ಳು ಆರೋಪ ಸಲ್ಲದು : ಹವಾಲ್ದಾರ್

ಜನವಾದಿ ವಾರ್ತೆ

ಲಿಂಗಸುಗೂರು ನ 17– ತಾಲೂಕಿನ ಸುಮಾರು 90 ಶಾಲೆಗಳಿಗೆ ಹವಾಲ್ದಾರ್ ಎಂಟರ್ ಪ್ರೈಸಸ್ ವತಿಯಿಂದ ಉತ್ತಮ ಗುಣಮಟ್ಟದ ಐಎಸ್ಐ ಮಾರ್ಕ್ನ ಶೂ ಮತ್ತು ಸಾಕ್ಸ್ ವಿತರಣೆ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಗುಣಮಟ್ಟದ ಪ್ರಮಾಣ ಪತ್ರ ಸಹ ನಮ್ಮ ಬಳಿ ಇದೆ

ಆದರೆ ಕಳಪೆ ಗುಣಮಟ್ಟದ ಶೂ ಮತ್ತು ಸಾಕ್ಸ್ ವಿತರಣೆ ಮಾಡಲಾಗಿದೆ ಎಂದು ಸುಳ್ಳು ಆರೋಪ ಸಲ್ಲದು ಎಂದು ಹವಾಲ್ದಾರ್ ಎಂಟರ್ ಪ್ರೈಸಸ್ ಮಾಲಿಕರಾದ ಶಾಹೀದ್ ಹವಾಲ್ದಾರ್ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಮಾತಾಡಿದ ಅವರು ಕಳೆದ 7 ವರ್ಷಗಳಿಂದ ತಾಲೂಕಿನ ಶಾಲೆಗಳಿಗೆ ನಮ್ಮ ಎಂಟರ್ ಪ್ರೈಸಸ್ ವತಿಯಿಂದ ಶೂ ಮತ್ತು ಸಾಕ್ಸ್ ವಿತರಣೆ ಮಾಡುತ್ತಿದ್ದೇವೆ. ಇಲ್ಲಿಯವರೆಗೆ ಶೂ



ಮತ್ತು ಸಾಕ್ಸ್ ಗುಣಮಟ್ಟದ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ. ಅತ್ಯತ್ತಮವಾದ ಸೇವೆಯನ್ನು ನಮ್ಮ ಎಂಟರ್ ಪ್ರೈಸಸ್ ನಿಂದ ಕೊಡತ್ತಾ ಬಂದಿದ್ದೇವೆ. ನಾವು ವಿತರಣೆ ಮಾಡಿರುವ ಶೂ ಮತ್ತು ಸಾಕ್ಸ್ ಮಕ್ಕಳು ಒಂದು ವರ್ಷದ ವರೆಗೆ ಹಾಕಿಕೊಳ್ಳುತ್ತಾರೆ. ಆದರೆ ದಲಿತ ಸಂಘರ್ಷ ಸಮಿತಿಯ ಮುದಗಲ್ ಹೋಬಳಿ ಘಟಕದ ಸಂಚಾಲಕರಾದ ಬಸವಾಜ ಬಂಕದಮನಿಯವರು ಸುಳ್ಳು ಆರೋಪವನ್ನು ಮಾಡಿ ನಮಗೆ ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ.ನಮ್ಮ ಎಂಟರ್ ಪ್ರೈಸಸ್ ನಿಂದ ವಿತರಣೆ ಮಾಡಿರುವ ಶೂ ಮತ್ತು ಸಾಕ್ಸ್ ಗಳು ಕಳಪೆ ಎಂದು ಯಾವ ಮಾನದಂಡದ ಮೇಲೆ ಅವರು ಹೇಳುತ್ತಾರೆಂದು ತಿಳಿಯದಾಗಿದೆ. ಈ ಬಗ್ಗೆ ಅನುಮಾನಗಳಿದ್ದರೆ ನಾವು ವಿತರಣೆ ಮಾಡಿರುವ ಶೂ ಮತ್ತು ಸಾಕ್ಸ್ ಗುಣಮಟ್ಟವನ್ನು ಪರಿಶೀಲಿಸಿ ನಂತರ ಈ ಬಗ್ಗೆ ಮಾತನಾಡಲಿ. ಆದರೆ ಇನ್ನೊಬ್ಬರ ಮಾತು ಕೇಳಿ ನಮ್ಮ ಎಂಟರ್ ಪ್ರೈಸಸ್ ಬಗ್ಗೆ ಪತ್ರಿಕೆ ಹೇಳಿಕೆ ನೀಡಿರುವುದುನ್ನು ನಾವು ಖಂಡಿಸುತ್ತೇವೆ ಎಂದು ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು.

ಈ ಸಂದರ್ಭದಲ್ಲಿ ಎಕ್ಬಲಾ ಹವಾಲ್ದಾರ, ಅಲ್ಲಾಭಕ್ಷ ಮನಿಯಾರ ಇದ್ದರು.

# ನಾಗಲಾಪೂರು ವಿಶೇಷ ಗ್ರಾಮ ಸಭೆ

ಜನವಾದಿ ವಾರ್ತೆ

ಮುದಗಲ್ ನ 16– ಪೂಜ್ಯ ಬುಡಕಟ್ಟು ನಾಯಕ ಬಿರ್ಸಾ ಮುಂಡಾ ರವರ ಜನ್ಮ ದಿನದ ಪ್ರಯುಕ್ತ ಪಟ್ಟಣ ಸಮೀಪದ ನಾಗಲಾಪೂರು ಗ್ರಾಮ ಪಂಚಾಯತಿ ವತಿಯಿಂದ ತೊಡಕ್ಕಿ ಗ್ರಾಮದಲ್ಲಿ ಜನ ಜಾತಿಯ ಗೌರವ ವರ್ಷದ ವಿಶೇಷ ಗ್ರಾಮ ಸಭೆ ಶುಕ್ರವಾರ ಜರುಗಿತು.

ಸಭೆಯಲ್ಲಿ ಸಂವಿಧಾನದ ಪ್ರಸ್ತಾವನೆ ಓದಿ ಮತ್ತು ಸ್ವಚ್ಚತೆ ಮತ್ತು ಮಾದಕ ಮುಕ್ತ ಸಮುದಾಯಗಳ ಕುರಿತು ಪ್ರತಿಜ್ಞಾ ವಿಧಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಬೋದಿಸಿದರು ,ಗ್ರಾಮದ ಜನರಿಗೆ ಟಿವಿ ಪೊರದೆ ಮೂಲಕ ಬುಡಕಟ್ಟು ಜನಾಂಗದ ಕುರಿತು ಜಾಗೃತಿ ಮೂಡಿಸಿ, ಪರಿಶಿಷ್ಟ ಪ್ರದೇಶಗಳಲ್ಲಿ ಪಂಚಾಯತಿ ವಿಸ್ತರಣೆ ಕಾಯಿದೆ ಮತ್ತು ಅರಣ್ಯ ಹಕ್ಕುಗಳ ಕಾಯಿದೆ ಕುರಿತು ಸಾರ್ವಜನಿಕರಿಗೆ ತರಬೇತಿ ನೀಡಲಾಗಿತು.

ಈ ಸಂದರ್ಭದಲ್ಲಿ ನಾಗಲಾಪೂರು ಗ್ರಾಮ ಪಂಚಾಯತಿ ಅಧ್ಯಕ್ಷ ಮೇಘಪ್ಪ



ರಾಠೋಡ, ಉಪಾಧ್ಯಕ್ಷೆ ಪಾರ್ವತೆಮ್ಮ ಶಿವನಗೌಡ ನಾಗಲಾಪೂರು, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಜ್ಯೋತಿಬಾಯಿ,ಸದಸ್ಯ ಆದಪ್ಪ ಅಂಗನವಾಡಿ ಕಾರ್ಯಕರ್ತೆ ಸುಜಾತ,ಆಶಾಕಾರ್ಯಕರ್ತೆ ಸರಸ್ವತಿ ಹಾಗೂ ಸರ್ವ ಸದಸ್ಯರು, ಸೇರಿದಂತೆ ಗ್ರಾಮ ಪಂಚಾಯತಿ ಸಿಬ್ಬಂದಿಗಳು ಉಪಸ್ಥಿತರಿದ್ದರು

# ರಾಯಚೂರು ನಗರಸಭೆ; ತಾತ್ಕಲಿಕ ಆಯ್ಕೆ ಪಟ್ಟಿ ಪ್ರಕಟ

ಜನವಾದಿ ವಾರ್ತೆ

ರಾಯಚೂರು ನ 16 – ಇಲ್ಲಿಯ ರಾಯಚೂರು ನಗರಸಭೆ ವ್ಯಾಪ್ತಿ ಪ್ರದೇಶದ ವಿಕಲಚೇತನರ ಸನ್–2018–19 ಮತ್ತು 2019–20ನೇ ಸಾಲಿನ ರೂ.15.38 (ಲಕ್ಷ) ಅನುದಾನದಡಿ ವಿಕಲಚೇತನರಿಗೆ ಯಂತ್ರ ಚಾಲಿತ ದ್ವಿ–ಚಕ್ರವಾಹನಗಳನ್ನು ವಿತರಿಸಲು ಅರ್ಜಿ ಆಹ್ವಾನಿಸಲಾಗಿದ್ದು, ಸದರಿ ಪಟ್ಟಿಯಲ್ಲಿ (25)ಫಲಾನುಭವಿಗಳ ಅರ್ಹರ ಪಟ್ಟಿಯನ್ನು ಪರಿಶೀಲಿಸಿ ಆಯ್ಕೆ ಮಾಡಿರುವುದನ್ನು ತಾತ್ಕಲಿಕ ಆಯ್ಕೆ ಪಟ್ಟಿ ಎಂದು ಪರಿಗಣಿಸಿ ನಗರಸಭೆ ಕಛೇರಿಯ ನೋಟೀಸ್ ಬೋರ್ಡಗೆ ಪ್ರಕಟಿಸಲಾಗಿದೆ ಎಂದು ರಾಯಚೂರು ನಗರಸಭೆಯ ಪೌರಾಯುಕ್ತರು ತಿಳಿಸಿದ್ದಾರೆ.

ನಿಯಮಾನುಸಾರ ಸಾರ್ವಜನಿಕ ಪತ್ರಿಕ ಪ್ರಕಟಣೆ ಪ್ರಚುರಪಡಿಸಿದ ಪ್ರಕಾರ ಒಟ್ಟು ಸ್ವೀಕೃತಿ (48)ಅರ್ಜಿಗಳನ್ನು ಶೇ.75%ರಷ್ಟು ವಿಕಲಚೇತನಯುಳ್ಳವರ ಯಾದಿಯನ್ನು ಪರಿಶೀಲಿಸಲು ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳು, ರವರಿಗೆ ಸಲ್ಲಿಸಲಾಗಿತ್ತು.

ಸ್ವೀಕೃತಗೊಂಡ ಅರ್ಜಿಗಳ ಅನುಸಾರ ತ್ರಿಚಕ್ರ ಮೋಟರ್ ವಾಹನಗಳು ಸೌಲಭ್ಯ ಇಲ್ಲದ ಕಾರಣ ದಿನಾಂಕ:27.11.2024 ರೊಳಗಾಗಿ ನಗರಸಭೆ ಕಛೇ–ರಿಗೆ ಈಗಾಗಲೇ ಅರ್ಜಿಗಳನ್ನು ಸಲ್ಲಿಸಿರುವ ದಾಖಲಾತಿಗಳಿಗೆ ಪುನಃ ದೃಢೀಕರಣದೊಂದಿಗೆ ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳ ಕಛೇರಿಯ ಓಔಅ ಪಡೆದುಕೊಂಡು ಸಲ್ಲಿಸಿದ ಆರ್ಹ ಫಲಾನುಭವಿಗಳಿಗೆ ದಿನಾಂಕ: 28.11.2024 ರಂದು ನಗರಸಭೆ ಸಭಾಂಗಣದಲ್ಲಿ ಬೆಳಿಗ್ಗೆ 11:00 ಗಂಟೆಗೆ ಸ್ಥಳದಲ್ಲಿ ಸೇರಿರುವ ಅರ್ಹರ ಉಪಸ್ಥಿತಿಯಲ್ಲಿ ಲಾಟರಿ ಮುಖಾಂತರ ಆಯ್ಕೆ ಮಾಡಿ ಅಂತಿಮ ಫಲಾನುಭವಿಗಳ ಪಟ್ಟಿಯನ್ನು ಪ್ರಕಟಿಸಲಾಗುವುದು. ಕಾರಣ ನಿಗದಿತ ದಿನಾಂಕದ ಒಳಗಡೆ ಸಂಬಂಧಪಟ್ಟ ಫಲಾನುಭವಿಗಳು ದಾಖಲೆಗಳನ್ನು ಸಲ್ಲಿಸಿರತಕ್ಕದ್ದು ಅವದಿ ಮೀರಿ ಬಂದ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದಾರೆ.

# ಸಾರ್ವಜನಿಕ ಗ್ರಂಥಾಲಯ; ಪುಸ್ತಕ ಆಯ್ಕೆ ಅರ್ಜಿ ಆಹ್ವಾನ

ಜನವಾದಿ ವಾರ್ತೆ

ರಾಯಚೂರು ನ 16 – ಇಲ್ಲಿಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವತಿಯಿಂದ 2024ನೇ ಸಾಲಿನ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಇಲ್ಲಿಯ ನಗರದ ಗ್ರಂಥಾಲಯಾಧಿಕಾ–ರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


**CITATION**

**IN THE COURT OF HON'BLE JUDGE JMFC III COURT AT RAICHUR**

CRL. MISC. NO. 1351/2024

Petitioners : 1. SURESH S/o Late Bangarappa, Aged 28 Years Occ: Pvt. Work.
2. GOVINDAMMA W/o Late Bangarappak Aged 48 Years, Occ: House-hold.
3. RAGHAVENDRA S/o Late Bangarappa, Aged 23 Years
All are R/o Tuntapur, Lingankhan Doddi Village Tq & Dist., Raichur.
4. VEERESH S/o Late Bangarappa, Aged 40 Years, R/o H.No.1-02,Dharur, Dist Maheboob Nagar (T.S].

// Versus //

RESPONDENT :1. The Registrar Birth and Death, Tahsildar, Raichur
2. All Concerned

CLAIM : For issue of directions to enter date of Death of **BANGARAPPA S/o Hanumayya Died on 12-09-2008**

**To,**

**The Above All Concerned,**

**WHEREAS**, the above named petitioners has stated in his petition for grant of death certificate of **BANGARAPPA S/o Hanumayya, who has died 12-09-2008. at Tuntapur, Lingankan Doddi** Village Tq & Dist., Raichur, and also stated that the death certificate of said person is necessary for their domestic purpose of all future life.

Through this notice, all concerned are hereby summoned to appear in this Court in person or duly authorized person or by a pleader on **23-12-2024** at **11-00 AM** to answer the claim and are directed to produce on that day all the documents upon which you intended to rely and suport of your defense and in default of your appearance on the above said date the petition will be heard and determined in your absence as ex-parte.

Given under my hand seal of the court on this 13-11-2024 day of November - **2024**.

Through,
sd/-
(Syed Nawaz pasha)
Advocate, Raichur.

// By order of the Court //
sd/-
Chief Ministerial Officer
Civild Judge & JMFC Court
Raichur


# ಮುಡಾ ಹಗರಣ: ನಟೇಶ್ ವಿರುದ್ಧ ಪ್ರಾಸಿಕ್ಯೂಷನ್‌ಗೆ ಸರ್ಕಾರ ಅನುಮತಿ; ಲೋಕಾಯುಕ್ತ ನೋಟಿಸ್

ಬೆಂಗಳೂರು ನ 16– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಅಕ್ರಮ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಡಾ ಮಾಜಿ ಆಯುಕ್ತ ಡಿಬಿ ನಟೇಶ್ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯ ಗೃಹ ಇಲಾಖೆ ಅನುಮತಿ ನೀಡಿದೆ.

ರಾಜ್ಯ ಸರ್ಕಾರ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿದ ಬೆನ್ನಲ್ಲೇ ಲೋಕಾಯುಕ್ತ ಪೊಲೀಸರು ಆರೋಪಿ ನಟೇಶ್ ಗೆ ನೋಟಿಸ್ ಜಾರಿ ಮಾಡಿದ್ದು, ಮುಂದಿನ ವಾರ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ.

ಸರ್ಕಾರಿ ಅಧಿಕಾರಿ ವಿಚಾರಣೆ ನಡೆಸಲು ಸರ್ಕಾರದ ಅನುಮತಿ ಕಡ್ಡಾಯವಾಗಿದೆ. ಹೀಗಾಗಿ 17(A) ಅಡಿಯಲ್ಲಿ ಲೋಕಾಯುಕ್ತ ಅಧಿಕಾ–ರಿಗಳು ಒಂದು ತಿಂಗಳ ಹಿಂದೆ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋ–ರಿದ್ದರು. ಇದೀಗ ಅನುಮತಿ ನೀಡಿದ್ದು,



ನಟೇಶ್ ಅವರಿಗೆ ಮುಂದಿನ ವಾರ ವಿಚಾರಣೆಗೆ ಹಾಜರಾಗುವಂತೆ ಲೋಕಾಯುಕ್ತ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

ಈ ಹಿಂದೆ ಮುಡಾ ಆಯುಕ್ತರಾಗಿದ್ದ ನಟೇಶ್ ಅವರು, ಸೈಟ್ ಮರು ಹಂಚಿಕೆಯಲ್ಲಿ ಭ್ರಷ್ಟಾಚಾರ ಎಸಗಿದ್ದಾರೆ ಎಂಬ ಆರೋಪ ಎದುರಿಸುತ್ತಿದ್ದಾರೆ.

ನಟೇಶ್ ಅವರು ಈಗಾಗಲೇ ಇಡಿ ಅಧಿಕಾರಿಗಳ ಮುಂದೆ ಮೂರು ಬಾರಿ ವಿಚಾರಣೆಗೆ ಹಾಜರಾಗಿದ್ದಾರೆ.

ಇನ್ನು ಇತ್ತೀಚೆಗೆ ಪ್ರಕರಣ–ಕ್ಕೆ ಸಂಬಂಧಿಸಿದಂತೆ ನಗರದ ಮಲ್ಲೇಶ್ವರಂನ 10ನೇ ಕ್ರಾಸ್ ನಲ್ಲಿರುವ ನಟೇಶ್ ಮನೆ ಮೇಲೆ ಇಡಿ ಅಧಿಕಾ–ರಿಗಳು ದಾಳಿ ಮಾಡಿದ್ದರು. ಸತತ 33 ಗಂಟೆಗಳ ಕಾಲ ದಾಖಲೆ ಪರಿಶೀಲನೆ ಮಾಡಿ 4 ಬ್ಯಾಗ್ ಕೊಂಡೊಯ್ದಿದ್ದರು. ಬಳಿಕ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು.

# ಸಚಿವ ಜಮೀರ್ 'HDK ಕರಿಯ' ಹೇಳಿಕೆ ಸರಿಯಲ್ಲ: ಡಿಸಿಎಂ ಡಿಕೆ ಶಿವಕುಮಾರ್ ಕಟು ಟೀಕೆ

ಬೆಂಗಳೂರು ನ 16– ವಕ್ಫ್ ಸಚಿವ ಜಮೀರ್ ಅಹ್ಮದ್ ಖಾನ್ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಕರಿಯಾ ಎಂದು ಕರೆದಿರುವುದು ರಾಜ್ಯದಲ್ಲಿ ಸಾಕಷ್ಟು ಆಕ್ರೋಶಕ್ಕೆ ಕಾರಣವಾಗಿದೆ. ಕಾಂಗ್ರೆಸ್





ನಾಯಕರೇ ಜಮೀರ್ ಅವರನ್ನು ಬಹಿರಂಗವಾಗಿ ಟೀಕಿಸಿದ್ದು ಇದೀಗ ಕಾಂಗ್ರೆಸ್ ರಾಜ್ಯಾಧ್ಯಕ್ಷ, ಡಿಸಿಎಂ ಡಿಕೆ ಶಿವಕುಮಾರ್ ಸಹ ಜಮೀರ್ ಅಹ್ಮದ್ ಅವರ ಕರಿಯಾ ಹೇಳಿಕೆ ಸರಿಯಲ್ಲ. ಕಪ್ಪು ಬಿಳುಪು ಅಂತ ಕರೆಯೋದು ಸರಿಯಲ್ಲ ಎಂದು ಟೀಕಿಸಿದ್ದಾರೆ.

ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಆ ಹೇಳಿಕೆಯನ್ನು ಒಪ್ಪುವುದಿಲ್ಲ. ಅದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಜಮೀರ್ ಏನು ಬೇಕಾದರೂ ಕರೆದುಕೊಳ್ಳಲಿ. ಕರಿಯ ಅಂತಾದರೂ, ಕೊಚ್ಚೆ ಅಂತಾದರೂ ಕರೆಯಲಿ. ನಾನು ಪಕ್ಷದ ಅಧ್ಯಕ್ಷನಾಗಿ ಖಂಡಿಸುತ್ತೇನೆ. ಜಮೀರ್ ವಿರುದ್ಧ ಕ್ರಮದ ಬಗ್ಗೆ ಮುಂದೆ ಯೋಚಿಸುತ್ತೇವೆ ಎಂದರು.

ಜಮೀರ್ ಖಾನ್ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ತೀವ್ರ ಪ್ರತಿಭಟನೆ ನಡೆಸುತ್ತಿವೆ. ಕುಮಾರಸ್ವಾಮಿ ವಿರುದ್ಧ ವರ್ಣ ನಿಂದನೆ ಮಾಡಿರುವ ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಸಂಪುಟದಿಂದ ವಜಾಗೊಳಿಸಬೇಕೆಂದು ಜೆಡಿಎಸ್ ಕಾರ್ಯಕರ್ತರು ಆಗ್ರಹಿಸುತ್ತಿದ್ದಾರೆ. ಮತ್ತೊಂದೆಡೆ ಒಕ್ಕಲಿಗರ ಸಂಘ ಸಹ ಕುಮಾರಸ್ವಾಮಿ ಪರ ಮಾತನಾಡಿದ್ದು ಜಮೀರ್ ಖಾನ್ ರನ್ನು ಸಂಪುಟದಿಂದ ವಜಾಗೊಳಿಸಬೇಕು. ಅಲ್ಲದೆ ಸಾರ್ವಜನಿಕವಾಗಿ ಕ್ಷಣೆಯಾಚಿಸಬೇಕು ಎಂದು ಆಗ್ರಹಿಸಿತ್ತು.

ತಮ್ಮ ಹೇಳಿಕೆ ತೀವ್ರ ಸ್ವರೂಪ ಪಡೆದುಕೊಂಡಿರುವುದನ್ನು ತಿಳಿದ ಜಮೀರ್ ಖಾನ್ ನಾನು ಕುಮಾರಸ್ವಾಮಿಯನ್ನು ಕರಿಯಣ್ಣ ಎಂದು ಕರೆಯುತ್ತಿದ್ದೆ ಅವರು ನನ್ನನ್ನು ಕುಳ್ಳ ಎಂದು ಕರೆಯುತ್ತಿದ್ದರು. ನನ್ನ ಹೇಳಿಕೆಯಿಂದ ಜೆಡಿಎಸ್ ಕಾರ್ಯಕರ್ತರಿಗೆ ನೋವಾಗಿದ್ದರೆ ನಾನು ಕ್ಷಮೆಯಾಚಿಸುತ್ತೇನೆ ಎಂದು ಜಮೀರ್ ಹೇಳಿದ್ದರು.

# ಗ್ರಾಮದಲ್ಲಿನ 3 ವರ್ಷದೊಳಗಿನ ಮಕ್ಕಳ ಸಮೀಕ್ಷೆ ನಡೆಸಿ ಕೂಸಿನ ಮನೆಗಳಿಗೆ ದಾಖಲಿಸಿ – ಖಲೀದ್ ಅಹಮ್ಮದ



ಜನವಾದಿ ವಾರ್ತೆ

ಮಾನ್ವಿ ನ 16– ಗ್ರಾ.ಪಂ. ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿನ 3 ವರ್ಷದೊಳಗಿನ ಮಕ್ಕಳ ಸಮೀಕ್ಷೇ ನಡೆಸಿ ಕೂಸಿನ ಮನೆಗಳಿಗೆ ದಾಖಲಿಸಿಕೊಳ್ಳುವುದಕ್ಕೆ ಕ್ರಮ ಕೈಗೊಳ್ಳಬೇಕು ಎಂದು ದೆಹಲಿಯ ಮೊಬೈಲ್ ಕ್ರಾಷ್ ಸಂಸ್ಥೆಯ ರಾಜ್ಯ ತಂಡದ ಅಧಿಕಾರಿ ವಿಜಯಲಕ್ಷ್ಮಿ ತಿಳಿಸಿದರು.

ತಾಲೂಕಿನ ನೀರಮಾನ್ವಿ ಗ್ರಾಮದಲ್ಲಿನ ಕೂಸಿನ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿ ಮಕ್ಕಳ ಹಾಜರಾತಿ, ಹಾಗೂ ಮಕ್ಕಳಿಗೆ ನೀಡುವ ಪೌಷ್ಟಿಕ ಆಹಾರದ ಗುಣಮಟ್ಟವನ್ನು ಪರಿಶೀಲಿಸಬೇಕು,ಮಕ್ಕಳ ಕಲಿಕೆಗೆ ಹಾಗೂ ಸುರಕ್ಷತೆಗೆ ಪೂರಕ ವಾತಾವರಣ ನಿರ್ಮಾಣ ಮಾಡಬೇಕು ಎಂದು ತಿಳಿಸಿದರು.

ತಾ.ಪಂ. ಇ.ಓ. ಖಲೀದ್ ಅಹಮ್ಮದ್ ಮಾತನಾಡಿ ಕುಸಿನ ಮನೆಯನ್ನು ಸರಿಯಾದ ವೇಳೆಗೆ ತೆರೆಯಬೇಕು,ಮಕ್ಕಳ ಹಾಜರಾತಿ ನಿರ್ವಹಣೆ ಮಾಡಬೇಕು,ಗ್ಯಾಸ್ ಖರೀದಿಸಿ ಉತ್ತಮ ಪೌಷ್ಟಿಕ ಆಹಾರ ಸಿದ್ದಪಡಿಸಿ ನೀಡಬೇಕು,

ತಾಲ್ಲೂಕಿನ ಸಾದಪುರ್, ಕುರ್ಡಿ, ಗೋರ್ಕಲ್, ಕುರ್ಡಿ ,ಅರೋಲಿ ಗ್ರಾ.ಪಂ. ವ್ಯಾಪ್ತಿಯ ಗ್ರಾಮಗಳ ಕೂಸಿನ ಮನೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ಪಿ.ಡಿ.ಓ.ಗಳಿಗೆ ಅಗತ್ಯ ಸೂಚನೆ ನೀಡಿದರು.

ತಾ.ಪಂ. ಪಂ,ರಾ . ಸಹಾಯಕ ನಿರ್ದೇಶಕಿ ದೀಪಾ ಅರಳಿಕಟ್ಟಿ , ಗ್ರಾ.ಪಂ. ಪಿ.ಡಿ.ಓ. ಬಸವರಾಜ, ಶ್ವೇತಾ, ತಾಲ್ಲೂಕು ಐಇಸಿ ಸಂಯೋಜಕರಾದ ಈರೇಶ,ಸಿಬ್ಬಂದಿಗಳಾದ ಅಜರುದ್ದೀನ್, ರಾಜೀವ್ ಗಾಂಧಿ,ಮಹಮ್ಮದ್, ಸಾಜಿದ್,ಸುರೇಶ,ವಿಜೇಂದ್ರ ಮತ್ತು ಕೂಸಿನ ಮನೆಯ ಮಕ್ಕಳು,ಅ–ರೈಕೆದಾರರು ಇದ್ದರು.

# ಸಾರ್ವಜನಿಕ ಗ್ರಂಥಾಲಯ ಇಲಾಖೆ; ನ.20ರಂದು ವಿಶೇಷ ಉಪನ್ಯಾಸ ಕಾರ್ಯಗಾರ

ಜನವಾದಿ ವಾರ್ತೆ

ರಾಯಚೂರು ನ 16 – ಇಲ್ಲಿಯ ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದ ಇದೇ ನ.20ರ ಬೆಳಿಗ್ಗೆ 9ಗಂಟೆಗೆ ಗ್ರಂಥಾಲಯದ ಆವರಣದಲ್ಲಿ ಸಾರ್ವಜನಿಕ ಓದುಗರಿಗೆ/ವಿದ್ಯಾರ್ಥಿಗಳಿಗೆ ಉಚಿತವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ವಿಶೇಷ ಉಪನ್ಯಾಸ ಕಾಯಗ್ರಾರ ಏರ್ಪಡಿಸಲಾಗಿದ್ದು, ಈ ಸ್ಪರ್ಧಾತ್ಮಕ ಪರೀಕ್ಷೆಗಳ ವಿಶೇಷ ಉಪನ್ಯಾಸ ಕಾರ್ಯಗಾರಕ್ಕೆ ಗ್ರಂಥಾಲಯ ಓದುಗರು, ಸಾರ್ವಜನಿಕರು ಒಂದು ದಿನದ ಉಚಿತ ಉಪನ್ಯಾಸ ಕಾರ್ಯಗಾರವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ನಗರದ ಗ್ರಂಥಾಲಯಾಧಿಕಾರಿಗಳು ತಿಳಿಸಿದ್ದಾರೆ.

ಈ ಕಾರ್ಯಗಾರಕ್ಕೆ ಕೆ.ಎ.ಎಸ್, ಐ.ಎ.ಎಸ್ ಕುರಿತು ರಾಯಚೂರು ಸಹಾಯಕ ಆಯುಕ್ತರಾದ ಗಜಾನನ ಬಾಳೆ, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಮಹೇಬೂಬ್ ಜಿಲಾನಿ, ಖುರೇಶಿ ಕುರ್ಡಿ, ರಾಯಚೂರು ತಹಶೀಲ್ದರ್ ಸುರೇಶ ವರ್ಮ, ರಾಯಚೂರು ನಗರಸಭೆಯ ಪೌರಾಯುಕ್ತರಾದಗುರುಸಿದ್ದಯ್ಯ ಹಿರೇಮಠ ಸಿಂಧನೂರು ತಹಶೀಲ್ದಾರ್ ಅರುಣ್ ದೇಸಾಯಿ, ಕಾರ್ಯಗಾರದಲ್ಲಿ ಭಾಗಿಯಾಗಲಿದ್ದಾರೆ ಎಂದು ನಗರದ ಗ್ರಂಥಾಲಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರವಾಸ್ಯೋದಮ ಇಲಾಖೆ; ಮಾರ್ಗದರ್ಶಿ ತರಬೇತಿಗೆ ಅರ್ಜಿ ಆಹ್ವಾನ

ಜನವಾದಿ ವಾರ್ತೆ

ರಾಯಚೂರು ನ 16 – ಇಲ್ಲಿಯ ಪ್ರವಾಸ್ಯೋದಮ ಇಲಾಖೆಯ ವತಿಯಿಂದ 2024–25ನೇ ಸಾಲಿನ ರಾಯಚೂರು ಜಿಲ್ಲೆಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ, ಹಿಂದುಳಿದ/ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ಪ್ರವಾಸಿ ಮಾರ್ಗದರ್ಶಿ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಪ್ರವಾಸ್ಯೋದಮ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಸಾಮಾನ್ಯ/ ಹಿಂದುಳಿದ/ ಅಲ್ಪಸಂಖ್ಯಾತ ವರ್ಗದವರಿಗೆ ವಯೋಮಿತಿ ಕನಿಷ್ಠ 21 ವರ್ಷಗಳು ಹಾಗೂ ಗರಿಷ್ಠ 45 ವರ್ಷಗಳು, ಪರಿಶಿಷ್ಟ ಜಾತಿ/ ಪಂಗಡದ, ವಿಧವೆ ಅಭ್ಯರ್ಥಿಗಳಿಗೆ ಕನಿಷ್ಠ 21 ವರ್ಷಗಳು ಹಾಗೂ ಗರಿಷ್ಠ 48 ವಯೋಮಿತಿಯೊಳಗಿರಬೇಕು.

ಜಿಲ್ಲೆಯ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ದೇಶಿಯ–ವಿದೇಶಿಯ ಪ್ರವಾಸಿಗರಿಗೆ ಜಿಲ್ಲೆಯ ಐತಿಹಾಸಿಕ, ಧಾರ್ಮಿಕ ಸಾಹಿತ್ಯಕ್ಕೆ, ಸಾಂಸ್ಕೃತಿಕ ಹಾಗೂ ಕಲಾವೈವಿದ್ಯತೆಗಳನ್ನು ಒಳಗೊಂಡ ಸೃಜನಶೀಲತೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಲು ಅಂದರೆ 'ಒಂದು ರಾಜ್ಯ ಹಲವು ವಿಸ್ಮಯಗಳು' ಎಂಬುದನ್ನು ಪರಿಚಯಿಸಲು ಪ್ರವಾಸಿ ಮಾರ್ಗದರ್ಶಿ ತರಬೇತಿ ಅರ್ಜಿ ಆಹ್ವಾನಿಸಲಾಗಿದ್ದು, ಏಖಖಿಈ ಖಣಟಝ 2016 ರನ್ವಯ ಅರ್ಹ ಆಸಕ್ತ ಅಭ್ಯರ್ಥಿಗಳು ಇದೇ 2024ರ ಡಿ.15ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಅರ್ಜಿಗಳನ್ನು ಕಚೇರಿಯಿಂದ ಪಡೆದು ಅರ್ಜಿ ಸಲ್ಲಿಸಲು ಹೊಂದಿರಬೇಕಾದ ಅರ್ಹತೆಗಳು, ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಕೊನೆಯ ದಿನಾಂಕದೊಳಗಾಗಿ ಸಲ್ಲಿಸತಕ್ಕದ್ದು, ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಗಣೇಶ ಗುಡಿ ಹತ್ತಿರ, ನಿಜಲಿಂಗಪ್ಪ ಕಾಲೋನಿ, ರಾಯಚೂರು ಜಿಲ್ಲೆ–584101 ಕಚೇರಿಗೆ ಕರ್ತವ್ಯದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಪ್ರವಾಸ್ಯೋದಮ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಾಲಕರ ದೂರಿನ ಮೇರೆಗೆ ಪತ್ರಿಕೆಗೆ ಹೇಳಿಕೆ – ಬಸವರಾಜ ಬಂಕದಮನಿ

ಜನವಾದಿ ವಾರ್ತೆ

ಮುದಗಲ್ ನ 16– ಶೂ ಮತ್ತು ಸಾಕ್ಸ್ ಕಳಪೆ ವಿತರಣೆ ಕುರಿತು ಪಾಲಕರ ದೂರಿನ ಮೇರೆಗೆ ಪತ್ರಿಕೆ ಹೇಳಿಕೆ ನೀಡಿದ್ದೇವೆ ವಿನಹ ಯಾವುದೆ ವೈಯಕ್ತಿಕ ದ್ವೇಷವಿಲ್ಲ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಮುದಗಲ್ ಹೋಬಳಿ ಘಟಕದ ಸಂಚಾಲಕ ಬಸವರಾಜ ಬಂಕದಮನಿ ಹೇಳಿದರು,



ಶನಿವಾರ ಸುದ್ದಿಗಾರ ಜೊತೆ ಮಾತನಾಡಿದ ಅವರು ಅನೇಕ ಪಾಲಕರು ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ ಗ್ರಾಮ ಘಟಕದ ಪದಾಧಿಕಾರಿಗಳು ನೇರವಾಗಿ ಭೇಟಿಯಾಗಿ ಮಾಹಿತಿ ನೀಡಿದ ಹಿನ್ನಲೆಯಲ್ಲಿ ಶೂ ಮತ್ತು ಸಾಕ್ಸ್ ವಿತರಣೆ ಕುರಿತು ಹೇಳಿಕೆ ನೀಡಿದ್ದೇವೆ ಆದರೆ ಯಾವುದೆ ಕಂಪನಿಯ ಮೇಲೆ ನಮ್ಮ ಸಂಘಟನೆಯ ವೈಯಕ್ತಿಕ ದ್ವೇಷವಿಲ್ಲ ಸರಕಾರ ಯೋಜನೆಗಳು ಬಡವರ ಮಕ್ಕಳಿಗೆ ಗುಣಮಟ್ಟದ ಕೂಡಿರವೇಕು ಎನ್ನುವ ಉದ್ದೇಶದಿಂದ ಹೇಳಿಕೆ ನೀಡಿದ್ದೇವೆ ಆದರೆ ತಪ್ಪುತಿದ್ದಿಕೊಳ್ಳದೆ ನಮ್ಮಸಂಘಟನೆ ವಿರುದ್ಧ ಹೇಳಿಕೆ ನೀಡಿದರೆ ಲಿಂಗಸುಗೂರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಮುಂದೆ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಮುದಗಲ್ ಹೋಬಳಿ ಘಟಕದ ಸಂಚಾಲಕ ಬಸವರಾಜ ಬಂಕದಮನಿ ಹೇಳಿದರು.

# ಸಿಎಂ ಸಿದ್ದರಾಮಯ್ಯರನ್ನೇ ಗಡಿಪಾರು ಮಾಡಲಿ; ಕಾಂಗ್ರೆಸ್ ದೂರಿಗೆ ಸ್ನೇಹಮಯಿ ಕೃಷ್ಣ ತಿರುಗೇಟು

ಮೈಸೂರು ನ 16– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಿಂದ ಅಕ್ರಮವಾಗಿ ನಿವೇಶನ ಪಡೆದಿದ್ದಾರೆ ಎಂದು ಆರೋಪಿಸಿ ದೂರು ನೀಡಿದ್ದ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ವಿರುದ್ಧ ಕಾಂಗ್ರೆಸ್ ಶನಿವಾರ ಮತ್ತೊಂದು ದೂರು ದಾಖಲಿಸಿದೆ.

ಸ್ನೇಹಮಹಿ ಕೃಷ್ಣ ಅವರನ್ನು ತಕ್ಷಣ ಬಂಧಿಸಿ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಮುಖಂಡರು ಇಂದು ಮೈಸೂರಿನ ಲಕ್ಷ್ಮಿಪುರಂ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಕಾಂಗ್ರೆಸ್ ದೂರಿಗೆ ಪ್ರತಿಕ್ರಿಯಿಸಿದ ಸ್ನೇಹಮಯಿ ಕೃಷ್ಣ ಅವರು, ಸಿಎಂ ಸಿದ್ದರಾಮಯ್ಯ ಅವರನ್ನೇ ಗಡಿಪಾರು ಮಾಡಬೇಕು ಎಂದು ತಿರುಗೇಟು ನೀಡಿದ್ದಾರೆ.

ನಾನು ಕಾನೂನುಬದ್ಧವಾದ ಹೋರಾಟ ನಡೆಸುತ್ತಿದ್ದೇನೆ. ಸಮಾಜಕ್ಕೆ ನ್ಯಾಯ ಕೊಡಿಸಲು ನಾನು ಹೋರಾಡುತ್ತಿದ್ದೇನೆ. ನನ್ನ





ಗಡಿಪಾರು ಮಾಡಲು ಅವಕಾಶವಿಲ್ಲ. ಸಿದ್ದರಾಮಯ್ಯರನ್ನ ಗಡಿಪಾರು ಮಾಡಲು ಸಾಕಷ್ಟು ಅವಕಾಶಗಳಿವೆ. ಸುಳ್ಳು ಭಾಷಣ ಮಾಡಿ ರಾಜ್ಯದ ಜನರನ್ನ ಪ್ರಚೋದಿಸುತ್ತಿದ್ದಾರೆ ಎಂದು ಆರೋಪಿಸಿದರು.

ಸಿಎಂ ಸಿದ್ದರಾಮಯ್ಯ ಅವರು ಸಮಾಜದ ಶಾಂತಿ ಹಾಳು ಮಾಡುತ್ತಿದ್ದಾರೆ. ನನ್ನ ವಿರುದ್ಧ ಹೋರಾಟ ಮಾಡಬೇಕು ಎಂದು ಅವರು ಕರೆ ನೀಡುತ್ತಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಆಕ್ರೋಶ ವ್ಯಕ್ತಪಡಿಸಿದರು.

ಸ್ನೇಹಮಯಿ ಕೃಷ್ಣ ವಿರುದ್ಧ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ 44 ಪ್ರಕರಣ ದಾಖಲಾಗಿದ್ದು, ಇದರಲ್ಲಿ 22 ಪ್ರಕರಣಗಳ ಎಫ್ ಐಆರ್ ನಮ್ಮಲ್ಲಿದೆ. ಈತ ರೌಡಿಶೀಟರ್ ಅಗಿದ್ದರೂ ಕಳೆದ ಮೂರುವರೆ ವರ್ಷದಿಂದ ಪೊಲೀಸರು ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಬ್ಲಾಕ್ ಮೇಲರ್ ವಿರುದ್ಧ ಪೊಲೀಸರು ಕ್ರಮ ಜರುಗಿಸಬೇಕು. ಭಾನುವಾರ ಬೆಳಗ್ಗೆ 10 ಗಂಟೆ ಒಳಗೆ ಎಫ್ ಐಆರ್ ದಾಖಲಿಸಿ ಆರೋಪಿಯನ್ನು ಬಂಧಿಸಬೇಕು. ಇಲ್ಲವಾದರೆ ಪೊಲೀಸ್ ಠಾಣೆ ಎದುರು ಅನಿರ್ದಿಷ್ಟಾವಧಿ ಧರಣಿ ನಡೆಸುತ್ತೇವೆ ಎಂದು ದೂರು ನೀಡಿದ ಬಳಿಕ ಕಾಂಗ್ರೆಸ್ ವಕ್ತಾರ ಎಂ ಲಕ್ಷ್ಮಣ ಅವರು ಹೇಳಿದ್ದಾರೆ.

# ಅಕಾಲಿ ದಳ ಅಧ್ಯಕ್ಷ ಸ್ಥಾನಕ್ಕೆ ಸುಖಬೀರ್ ಸಿಂಗ್ ಬಾದಲ್ ರಾಜೀನಾಮೆ



ಚಂಡೀಗಢ ನ 16– ಎರಡೂವರೆ ತಿಂಗಳ ಹಿಂದೆ ಅಕಾಲ್ ತಖ್ತ್‌ನಿಂದ 'ತಂಖಯಾ'(ಧಾರ್ಮಿಕ ದುಷ್ಕೃತ್ಯದ ಅಪರಾಧಿ) ಎಂದು ಘೋಷಿಸಲ್ಪಟ್ಟ ಶಿರೋಮಣಿ ಅಕಾಲಿದಳ(ಎಸ್‌ಎಡಿ) ಅಧ್ಯಕ್ಷ ಸುಖಬೀರ್ ಸಿಂಗ್ ಬಾದಲ್ ಅವರು ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಶನಿವಾರ ರಾಜೀನಾಮೆ ನೀಡಿದ್ದಾರೆ.

"SAD ಅಧ್ಯಕ್ಷ ಎಸ್ ಸುಖ್ಬೀರ್ ಸಿಂಗ್ ಬಾದಲ್ ಅವರು ಹೊಸ ಅಧ್ಯಕ್ಷರ ಆಯ್ಕೆಗೆ ದಾರಿ ಮಾಡಿಕೊಡಲು ಇಂದು ಪಕ್ಷದ ಕಾರ್ಯಕಾರಿ ಸಮಿತಿಗೆ ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದಾರೆ" ಎಂದು ಪಕ್ಷದ ವಕ್ತಾರ ಡಾ. ದಲ್ಜಿತ್ ಸಿಂಗ್ ಚೀಮಾ ಅವರು ನಲ್ಲಿ ಪೋಸ್ಟ್ ಮಾಡಿದ್ದಾರೆ.

ತಮ್ಮ ನಾಯಕತ್ವದ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಕ್ಕಾಗಿ ಮತ್ತು ಅಧಿಕಾರವಧಿಯುದ್ದಕೂ ಬೆಂಬಲ, ಸಹಕಾರ ನೀಡಿದ ಪಕ್ಷದ ನಾಯಕರು ಕಾರ್ಯಕರ್ತರಿಗೆ ಬಾದಲ್ ಧನ್ಯವಾದ ಹೇಳಿದ್ದಾರೆ ಎಂದು ಚೀಮಾ ಪೋಸ್ಟ್ ನಲ್ಲಿ ತಿಳಿಸಿದ್ದಾರೆ.

ಅಕ್ಟೋಬರ್ 24 ರಂದು, ಅಕಾಲ್ ತಖ್ತ್ ಸುಖ್ಬೀರ್ ಸಿಂಗ್ ಬಾದಲ್ ಅವರನ್ನು ಉಪಚುನಾವಣೆಯಲ್ಲಿ ಪಕ್ಷದ ಪರ ಪ್ರಚಾರ ಸೇರಿದಂತೆ ಯಾವುದೇ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ನಿರ್ಬಂಧಿಸಿತು.

ರಾಜ್ಯದ ನಾಲ್ಕು ವಿಧಾನಸಭಾ ಕ್ಷೇತ್ರಗಳಿಗೆ ನವೆಂಬರ್ 20 ರಂದು ಉಪಚುನಾವಣೆ ನಿಗದಿಯಾಗಿದೆ.

# ಬಳ್ಳಾರಿಯಲ್ಲಿ ಬಾಲಕಾರ್ಮಿಕ ಪದ್ದತಿ ನಿರ್ಮೂಲನೆ ಕುರಿತು ಜನಜಾಗೃತಿ ಜಾಥ ಹಾಗೂ ಅಂತರಾಷ್ಟ್ರೀಯ ದತ್ತು ಮಾಸಾಚರಣೆ

ಬಳ್ಳಾರಿ ನ 16 – ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ ಮತ್ತು ಜಿಲ್ಲಾ ಬಾಲಕಾರ್ಮಿಕ ಯೋಜನೆ ಇವರ ಸಹಯೋಗದಲ್ಲಿ ಶನಿವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಆವರಣದಿಂದ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಜನಜಾಗೃತಿ ಜಾಥ ಹಾಗೂ ಬೀದಿ ನಾಟಕದ ಜಾಗೃತಿ ಕಾರ್ಯಕ್ರಮ ಹಾಗೂ ಅಂತರಾಷ್ಟ್ರೀಯ ದತ್ತು ಮಾಸಾಚರಣೆ ನವೆಂಬರ್–2024ರ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್



ನ್ಯಾಯಾಧೀಶರಾದ ರಾಜೇಶ್. ಎನ್ ಹೊಸಮನೆ, ಮತ್ತು ಅಪರ ಜಿಲ್ಲಾಧಿಕಾರಿ ಮಹಮ್ಮದ್.ಎನ್ ಝುಬೇರ್ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಇದೇ ವೇಳೆ ಅಪರ ಜಿಲ್ಲಾಧಿಕಾರಿ ಅವರು ವೇಳೆ ಅಂತರಾಷ್ಟ್ರೀಯ ದತ್ತು ಮಾಸಾಚರಣೆ ನವೆಂಬರ್–2024ರ ಅಂಗವಾಗಿ ಕಾನೂನು ಬದ್ಧ ದತ್ತು ಕುರಿತ ಸಂಕಲ್ಪ ಸಂದೇಶದ ಪ್ರತಿಜ್ಞಾ ವಿಧಿ ಬೋಧಿಸಿದರು.

ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಪದ್ಧತಿ ಅಳಿಸಿ–ಮಕ್ಕಳನ್ನು ಶಾಲೆಗೆ ಕಳುಹಿಸಿ. ಬನ್ನಿ, ಬಾಲ ಕಾರ್ಮಿಕರನ್ನು ದುಡಿತದಿಂದ ಬಿಡಿಸೋಣ. ಬನ್ನಿ ಮಕ್ಕಳ ಬಾಲ್ಯವನ್ನು ರಕ್ಷಿಸಿ, ಬೆಳೆಸಲು ಸದ್ಧರಾಗೋಣ ಎನ್ನುವ ಫಲಕವುಳ್ಳ ಬ್ಯಾನರ್ ಮೂಲಕ ಜನ ಜಾಗೃತಿ ಸಂಚಾರಿ ವಾಹನ ಕಾರ್ಯಕ್ರಮ–2024ಗೆ ವಿದ್ಯುಕ್ತ ಚಾಲನೆ ನೀಡಿದರು.

ಜಾನಪದ ಕಲಾ ತಂಡವು ಜಾಗೃತಿ ಗೀತೆಗಳ ಮೂಲಕ ಬಾಲ ಕಾರ್ಮಿಕ ಪದ್ಧತಿ ಮತ್ತು ಕಿಶೋರ ಕಾರ್ಮಿಕ ಪದ್ಧತಿಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿದ್ದು ಜಾಥಾದ ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ವಿಜಯಲಕ್ಷ್ಮೀ ಮೈದೂರ್, ಕಾರ್ಮಿಕ ಅಧಿಕಾರಿ ಸಿದ್ದಪ್ಪ ಖೈನೂರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆ ನಾಗಪ್ಪ, ಕಾರ್ಮಿಕ ನಿರೀಕ್ಷಕರಾದ ರಮೇಶ್, ಪರಶುರಾಮ್, ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಎ.ಮೌನೇಶ್ ಹಾಗೂ ಇತರರು ಉಪಸ್ಥಿತರಿದ್ದರು.

# ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಆರೀಫ ಮಿಯಾ ಆಯ್ಕೆ

ಜನವಾದಿ ವಾರ್ತೆ

ಸಿರವಾರ ನ 16– ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಆರೀಫ್ ಮಿಯಾ ಆಯ್ಕೆಯಾಗಿದ್ದಾರೆ.

ಶನಿವಾರ ನಡೆದ 2024–29 ನೇ ಸಾಲಿನ ತಾಲೂಕು ಸರ್ಕಾರಿ ನೌಕರರ ಸಂಘದ ಚುನಾವಣೆಯಲ್ಲಿ ಅಧ್ಯಕ್ಷ ರಾಗಿ ಆರೀಫ್ ಮಿಯಾ (ಶಿಕ್ಷಣ ಇಲಾಖೆ), ಆಯ್ಕೆಯಾದರೆ, ಖಜಾಂಚಿ ಯಾಗಿ ಪ್ರದೀಪ (ಆರೋಗ್ಯ ಇಲಾಖೆ), ಹಾಗು ರಾಜ್ಯ ಪರಿಷತ್ ಸದಸ್ಯರಾಗಿ ಪ್ರಸಾದ (ಪಂಚಾಯತ್ ರಾಜ್ ಇಲಾಖೆ) ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಆರೀಫ್ ಮಿಯಾ ವಿರುದ್ಧ ಹನುಮಂತ ಚನ್ನೂರ ಮತ್ತು ತಿಮ್ಮಣ್ಣ ನಾಯಕ ಬಲ್ಲಟಗಿ



ಸ್ಪರ್ಧಿಸಿ ಸೋಲನ್ನು ಅನುಭವಿಸಿದ್ದಾರೆ. ಖಜಾಂಚಿ ಸ್ಥಾನಕ್ಕೆ ಪ್ರದೀಪ ವಿರುದ್ಧ ಚನ್ನವೀರಯ್ಯ ಹೊಸಮಠ, ರಾಜ್ಯ ಪರಿಷತ್ ಸದಸ್ಯ ಸ್ಥಾನಕ್ಕೆ ಪ್ರಸಾದ ವಿರುದ್ಧ ವೆಂಕಟೇಶ ಜಕ್ಕಲದಿನ್ನಿ ಸ್ಪರ್ಧಿಸಿದ್ದರು.

# ನೀತಿ ಸಂಹಿತೆ ಉಲ್ಲಂಘನೆ ದೂರು: ನಡ್ಡಾ, ಖರ್ಗೆ ಪ್ರತಿಕ್ರಿಯೆ ಕೇಳಿದ ಚುನಾವಣಾ ಆಯೋಗ

ನವದೆಹಲಿ ನ 16– ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆಪಿ ನಡ್ಡಾ ಹಾಗೂ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಂದ ಚುನಾವಣಾ ಆಯೋಗ ಪ್ರತಿಕ್ರಿಯೆ ಕೇಳಿದೆ.

ಬಿಜೆಪಿ ಮತ್ತು ಕಾಂಗ್ರೆಸ್ ಪರಸ್ಪರರ ವಿರುದ್ಧ ಚುನಾವಣಾ ಆಯೋಗಕ್ಕೆ (ಇಸಿ) ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ, ಚುನಾವಣಾ ಆಯೋಗ ಈ ಕ್ರಮ ಕೈಗೊಂಡಿದೆ. ಭಾರತೀಯ ಜನತಾ ಪಕ್ಷದ (ಬಿಜೆಪಿ) ಅಧ್ಯಕ್ಷ ಜೆಪಿ ನಡ್ಡಾ ಮತ್ತು ಕಾಂಗ್ರೆಸ್ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪ್ರತ್ಯೇಕ ಪತ್ರ ಬರೆದಿರುವ ಚುನಾವಣಾ ಆಯೋಗ, ದೂರಿನ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಕೇಳಿದೆ.

ಆಯೋಗ ಎರಡು ಪಕ್ಷಗಳ ನಡುವೆ ದೂರುಗಳನ್ನು ವಿನಿಮಯ ಮಾಡಿಕೊಂಡಿದೆ. ಚುನಾವಣಾ ಆಯೋಗ ಸೋಮವಾರ (ನವೆಂಬರ್ 18) ಮಧ್ಯಾಹ್ನ 1 ಗಂಟೆಯೊಳಗೆ ಪ್ರತಿಕ್ರಿಯೆ ನೀಡುವಂತೆ ಎರಡೂ





ಪಕ್ಷದ ಅಧ್ಯಕ್ಷರನ್ನು ಕೇಳಿದೆ.

ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಸಾರ್ವಜನಿಕ ಸೌಹಾರ್ದತೆ ಉಂಟಾಗದಂತೆ ತಾರಾ ಪ್ರಚಾರಕರು ಮತ್ತು ನಾಯಕರನ್ನು ಹಿಡಿತದಲ್ಲಿಟ್ಟುಕೊಳ್ಳುವಂತೆ ಆಯೋಗ ನೀಡಿದ್ದ ಈ ಹಿಂದಿನ ಸಲಹೆಯನ್ನು ಅಧ್ಯಕ್ಷರುಗಳಿಗೆ ನೆನಪಿಸಿದೆ.

ಮಹಾರಾಷ್ಟ್ರದಲ್ಲಿ ಚುನಾವಣಾ ಪ್ರಚಾರದ ವೇಳೆ ಸಂವಿಧಾನದ ಬಗ್ಗೆ ಸುಳ್ಳು ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಹಿರಿಯ ನಾಯಕ ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ರಾಹುಲ್ ಗಾಂಧಿ ಹೇಳಿಕೆಗಳು ರಾಜ್ಯಗಳ ನಡುವೆ ವೈಷಮ್ಯವನ್ನು ಬಿತ್ತುವ ಉದ್ದೇಶವನ್ನು ಹೊಂದಿವೆ ಎಂದು ಬಿಜೆಪಿ ಆರೋಪಿಸಿದೆ.

ನವೆಂಬರ್ 6 ರಂದು, ತಮ್ಮ ಮಹಾರಾಷ್ಟ್ರ ಚುನಾವಣಾ ಪ್ರಚಾರದ ಸಮಯದಲ್ಲಿ, ರಾಹುಲ್ ಗಾಂಧಿ "ರಾಜ್ಯಗಳನ್ನು ಪರಸ್ಪರರ ವಿರುದ್ಧ ಎತ್ತಿಕಟ್ಟಲು" ಪ್ರಯತ್ನಿಸಿದರು ಎಂದು ಕೇಂದ್ರ ಸಚಿವ ಅರ್ಜುನ್ ರಾಮ್ ಮೇಘವಾಲ್ ಹೇಳಿದ್ದಾರೆ.

ಕಾಂಗ್ರೆಸ್, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಮತ್ತು ಇನ್ನೊಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಎರಡು ಪ್ರತ್ಯೇಕ ದೂರುಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿದೆ. ಮಹಾರಾಷ್ಟ್ರ ಮತ್ತು ಜಾರ್ಖಂಡ್‌ನಲ್ಲಿ ನಡೆಯುತ್ತಿರುವ ಪ್ರಚಾರದ ಸಮಯದಲ್ಲಿ ಇಬ್ಬರೂ ನಾಯಕರು ತಮ್ಮ ಭಾಷಣಗಳಲ್ಲಿ ವಿಭಜನೆ, ಸುಳ್ಳು ಹೇಳಿಕೆಗಳನ್ನು ನೀಡಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ. ಹಿರಿಯ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಅವರು ಎಕ್ಸ್ ಪೋಸ್ಟ್‌ನಲ್ಲಿ ದೂರಿನ ಪತ್ರಗಳನ್ನು ಲಗತ್ತಿಸಿದ್ದಾರೆ ಮತ್ತು ಚುನಾವಣಾ ನಿಯಮಗಳನ್ನು ಉಲ್ಲಂಘಿಸಿರುವ ಬಿಜೆಪಿ ನಾಯಕತ್ವದ ವಿರುದ್ಧ ತನಿಖೆ ನಡೆಸುವಂತೆ ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

ಜಾರ್ಖಂಡ್‌ನಲ್ಲಿ ಎರಡು ಹಂತಗಳಲ್ಲಿ ವಿಧಾನಸಭೆ ಚುನಾವಣೆ ನಡೆಯುತ್ತಿದೆ. ನವೆಂಬರ್ 20 ರಂದು ಎರಡನೇ ಹಂತದ ಮತದಾನ ನಡೆಯಲಿದ್ದು, ಮಹಾರಾಷ್ಟ್ರ ಒಂದೇ ಹಂತದಲ್ಲಿ ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ಎರಡೂ ರಾಜ್ಯಗಳ ಮತ ಎಣಿಕೆ ನವೆಂಬರ್ 23 ರಂದು ನಡೆಯಲಿದೆ.

# ಮಣಿಪುರದಲ್ಲಿ 6 ಮಂದಿ ಹತ್ಯೆ: 2 ಸಚಿವರು, 3 ಶಾಸಕರ ಮನೆಗೆ ನುಗ್ಗಿದ ಪ್ರತಿಭಟನಾಕಾರರು; ಕರ್ಫ್ಯೂ ಜಾರಿ!

ಇಂಫಾಲ ನ 16– ಮಣಿಪುರದ ಜಿರಿಬಾಮ್ ಜಿಲ್ಲೆಯಲ್ಲಿ ಆರು ಜನರ ಹತ್ಯೆಗೆ ನ್ಯಾಯಕ್ಕಾಗಿ ಒತ್ತಾಯಿಸುತ್ತಿರುವ ಪ್ರತಿಭಟನಾಕಾರರು, ಮಣಿಪುರದ ಇಂಫಾಲ್‌ನಲ್ಲಿರುವ ಇಬ್ಬರು ಸಚಿವರು ಮತ್ತು ಮೂವರು ಶಾಸಕರ ನಿವಾಸಗಳಿಗೆ ನುಗ್ಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಶಾಸಕರ ಮನೆಗಳ ಮೇಲೆ ಗುಂಪು ದಾಳಿಗಳ ಹಿನ್ನೆಲೆಯಲ್ಲಿ ಇಂಫಾಲ್ ಪಶ್ಚಿಮ ಆಡಳಿತ ಅನಿರ್ದಿಷ್ಟ ಅವಧಿಗೆ ಜಿಲ್ಲೆಯಲ್ಲಿ ನಿಷೇಧಾಜ್ಞೆಗಳನ್ನು ವಿಧಿಸಿದೆ. ಇಂಫಾಲ್ ಪಶ್ಚಿಮ ಜಿಲ್ಲಾ ಮ್ಯಾಜಿಸ್ಟ್ರೇಟ್ ಟಿ.ಕಿರಣಕುಮಾರ್ ಹೊರಡಿಸಿದ ಆದೇಶದ ಪ್ರಕಾರ, ಶನಿವಾರ ಸಂಜೆ 4.30 ರಿಂದ ಕರ್ಫ್ಯೂ ವಿಧಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಸಪಂ ರಂಜನ್ ಅವರ ಲ್ಯಾಂಫೆಲ್ ಸನಕೀತೆಲ್ ಪ್ರದೇಶದಲ್ಲಿರುವ ನಿವಾಸಕ್ಕೆ ಗುಂಪೊಂದು ನುಗ್ಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಲ್ಯಾಂಫೆಲ್ ಸನಕೀಥೆಲ್ ಅಭಿವೃದ್ಧಿ ಪ್ರಾಧಿಕಾರದ ಪ್ರತಿನಿಧಿ ಡೇವಿಡ್



ಸುದ್ದಿಗಾರರೊಂದಿಗೆ ಮಾತನಾಡಿ, "ಮೂವರ ಹತ್ಯೆಗೆ ಸಂಬಂಧಿಸಿದ ವಿಷಯಗಳನ್ನು ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು ಮತ್ತು ಸಾರ್ವಜನಿಕರ ಭಾವನೆಗಳನ್ನು ಗೌರವಿಸಲು ಸರ್ಕಾರ ವಿಫಲವಾದರೆ ಸಚಿವರು ರಾಜೀನಾಮೆ ನೀಡಲಾಗುವುದು ಎಂದು ಸಪಂ ನಮಗೆ ಭರವಸೆ ನೀಡಿದರು". ಎಂದು ಹೇಳಿದ್ದಾರೆ.

ಇಂಫಾಲ್ ಪಶ್ಚಿಮ ಜಿಲ್ಲೆಯ ಸಗೋಲ್‌ಬಂದ್ ಪ್ರದೇಶದಲ್ಲಿ ಪ್ರತಿಭಟನಾಕಾರರು ಬಿಜೆಪಿ ಶಾಸಕ, ಮುಖ್ಯಮಂತ್ರಿ ಎನ್ ಬಿರೇನ್ ಸಿಂಗ್ ಅವರ ಅಳಿಯ ಕೂಡ ಆಗಿರುವ ಆರ್‌ಕೆ ಇಮೊ ಅವರ ನಿವಾಸದ ಮುಂದೆ ಜಮಾಯಿಸಿ "ಸರ್ಕಾರದಿಂದ ಸೂಕ್ತ ಪ್ರತಿಕ್ರಿಯೆಗೆ" ಒತ್ತಾಯಿಸಿ ಘೋಷಣೆಗಳನ್ನು ಕೂಗಿದ್ದಾರೆ. ಮೂವರ ಹತ್ಯೆ ಮತ್ತು "24 ಗಂಟೆಗಳ ಒಳಗೆ ಅಪರಾಧಿಗಳನ್ನು ಬಂಧಿಸಲು" ಅಧಿಕಾರಿಗಳಿಗೆ ಒತ್ತಾಯಿಸಿದ್ದಾರೆ.

ಕೇಶಾಮ್‌ಥಾಂಗ್ ಕ್ಷೇತ್ರದ ಪಕ್ಷೇತರ ಶಾಸಕ ಸಪಂ ನಿಶಿಕಾಂತ ಸಿಂಗ್ ಅವರನ್ನು ಟಿಡ್ಡಿಮ್ ರಸ್ತೆಯಲ್ಲಿರುವ ಅವರ ನಿವಾಸದಲ್ಲಿ ಭೇಟಿ ಮಾಡಲು ಬಂದಿದ್ದ ಪ್ರತಿಭಟನಾಕಾರರು, ಶಾಸಕರು ರಾಜ್ಯದಲ್ಲಿ ಇಲ್ಲ ಎಂದು ತಿಳಿಸಿದ ನಂತರ ಅವರ ಒಡೆತನದ ಸ್ಥಳೀಯ ಪತ್ರಿಕೆಯ ಕಚೇರಿ ಕಟ್ಟಡವನ್ನು ಗುರಿಯಾಗಿಸಿದರು ಎಂದು ಹಿರಿಯ ಅಧಿಕಾರಿಯೊಬ್ಬರು ಇದೇ ವೇಳೆ ಮಾಹಿತಿ ನೀಡಿದ್ದಾರೆ.

ಜನಸಮೂಹ ಕಚೇರಿ ಕಟ್ಟಡದ ಮುಂಭಾಗದಲ್ಲಿ ಕೆಲವು ತಾತ್ಕಾಲಿಕ ಕಟ್ಟಡಗಳನ್ನು ನಾಶಪಡಿಸಿದೆ.

# ಮೊದಲನೇ ಪುಟದಿಂದ

## ಜಿಲ್ಲೆಯ ಕೀರ್ತಿ ಪತಾಕೆ ಹಾರಿಸಿ –ಎನ್.ಎಸ್.ಭೋಸರಾಜು

ಇಂತಹ ಪ್ರತಿಭೆಯನ್ನು ಹೊರತರಲು ಸರ್ಕಾರ ಯುವಜನೋತ್ಸವದ ವ್ಯವಸ್ಥೆ ಮಾಡಿದೆ. ಶಾಲಾ-ಕಾಲೇಜುಗಳಲ್ಲಿ ಓದಿನ ಕಡೆಗೆ ಹೆಚ್ಚಿನ ಗಮನ ಇರುತ್ತದೆ. ಆದರೆ ಓದಿನೊಂದಿಗೆ ತಮ್ಮಲ್ಲಿರುವ ಪ್ರತಿಭೆಗೂ ಸಹ ಮಹತ್ವ ನೀಡಬೇಕು. ಅತಿ ಹೆಚ್ಚು ಸಂಖ್ಯೆಯಲ್ಲಿ ಯುವಜನರನ್ನು ಹೊಂದಿರುವ ದೇಶ ನಮ್ಮದು. ಯುವ ಭಾರತವು ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪ್ರಸ್ತುತ ಮುಂಚೂಣಿಯಲ್ಲಿದೆ. ಇಲ್ಲಿ ಸ್ಪರ್ಧಿಸಿದ ಯುವಜನತೆ ಉನ್ನತ ಮಟ್ಟದಲ್ಲಿ ಸಾಧನೆ ಮಾಡಲಿ ಎಂದರು.

15ರಿಂದ 29 ವರ್ಷದೊಳಗಿನ ಯುವಕ, ಯುವತಿಯರು, ನಾನಾ ಶಾಲಾ, ಕಾಲೇಜುಗಳ ವಿದ್ಯಾರ್ಥಿಗಳು, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ನೋಂದಣಿಯಾದ ಯುವಕ ಸಂಘಗಳು, ಯುವತಿ ಮಂಡಳಿಗಳು ಭಾಗವಹಿಸಲು ಅವಕಾಶ ನೀಡಲಾಗಿತ್ತು.

ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಜನಪದ ನೃತ್ಯ, ಜನಪದ ಗೀತೆ ಗಾಯನ, ಕವಿತೆ ಬರೆಯುವುದು, ಚಿತ್ರಕಲೆ, ಗುಡಿಕೈಗಾರಿಕೆಯ ಕಲಾ ಪ್ರಕಾರ, ನೇಕಾರಿಕೆ/ ಜವಳಿ, ಕೃಷಿ ಉತ್ಪನ್ನಗಳು ಶಾಸ್ತ್ರಿಯ ಸಂಗೀತ ಗಾಯನ ಮತ್ತು ಸಂಗೀತ ವಾದ್ಯಗಳು ನುಡಿಸುವ ಮೂಲಕ ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಪ್ರದರ್ಶಿಸಿದರು. ಯುವಪ್ರತಿಭೆಗಳಿಗೆ ಶಿಳ್ಳೆ, ಚಪ್ಪಾಳೆಗಳಿಂದ ಮೆಚ್ಚುಗೆ ವ್ಯಕ್ತವಾಯಿತು. ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಸುಮಾರು 300 ವಿದ್ಯಾರ್ಥಿಗಳು ನೋಂದಣಿ ಮಾಡಲಾಯಿತು.

ಇದೇ ಸಂದರ್ಭದಲ್ಲಿ ರಾಯಚೂರು ನಗರಸಭೆಯ ಅಧ್ಯಕ್ಷರಾದ ನರಸಮ್ಮ ನರಸಿಂಹಲು ಮಾಡಗಿರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿರೇಶ ನಾಯಕ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಸಹ ಕಾರ್ಯದರ್ಶಿಯಾದ ಡಾ.ದಂಡಪ್ಪ ಬಿರಾದಾರ, 2024-25ನೇ ಸಾಲಿನ ಸಂಗೀತ ಕ್ಷೇತ್ರದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಎ.ಎಸ್.ಸದಶಿವಪ್ಪ, 2024-25ನೇ ಸಾಲಿನ ಸಮಾಜ ಸೇವೆ ಕ್ಷೇತ್ರದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಮಲ್ಲಮ ಸೂಲಗಿತ್ತಿ ಸೇರಿದಂತೆ ರಾಯಚೂರು ನಗರಸಭೆಯ ಸದಸ್ಯರು ಹಾಗೂ ವಿವಿಧ ಶಾಲಾ, ಕಾಲೇಜಿನ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಇದ್ದರು.

## ಮುಖ್ಯ ರಸ್ತೆಯ ಚರಂಡಿ ತೆರವು ಕಾರ್ಯಾಚರಣೆ

ಈ ಸಮಸ್ಯೆಯನ್ನು ಗಂಭೀರವಾಗಿ ತೆಗೆದುಕೊಂಡು.ಸಹಾಯಕ ಆಯುಕ್ತರಾದ ಗಜಾನನ ಬಾಲೆ ಐಎಎಸ್ ಅವರ ನೇತೃತ್ವದಲ್ಲಿ ಬೆಳಿಗ್ಗೆ 4 ಗಂಟೆಗೆ ವಿವಿಧ ಅಧಿಕಾರಿಗಳ, ಹಾಗೂ ಪೊಲೀಸ್ ಇಲಾಖೆಯವರ ಸಹಯೋಗದೊಂದಿಗೆ ಕಾರ್ಯಾಚರಣೆ ಮಾಡಿ ರಸ್ತೆಯಲ್ಲಿ ಇರುವ ಚರಂಡಿಯ ಮೇಲೆ ಅನಧಿಕೃತವಾಗಿ ಹಾಕಿಕೊಂಡಿರುವ ಅಂಗಡಿ ಮುಗ್ಗಟ್ಟುಗಳನ್ನು ತೆರವುಗೊಳಿಸುವ ಮೂಲಕ ಬಹುದಿನಗಳಿಂದ ನೆನೆಗುದಿಗೆ ಬಿದ್ದಿರುವ ಸಮಸ್ಯೆಯನ್ನು ಬಗೆಹರಿಸುವ ಮೂಲಕ ಈಗಾಗಲೇ ಮುಚ್ಚಿ ಹೋಗಿ ನೀರು ಸ್ಥಗಿತವಾಗಿದ್ದನ್ನು ತೆರವುಗೊಳಿಸಿ ಇಡೀ ಗಬ್ಬೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನತೆಗೆ ಅನುಕೂಲ ಮಾಡಿ ಕೊಟ್ಟ ಸಹಾಯಕ ಆಯುಕ್ತರಿಗೆ ಹಾಗೂ ಅವರ ತಂಡದವರಿಗೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ ಕಾರ್ಯಾಚರಣೆಯಲ್ಲಿ ತಹಶೀಲ್ದಾರರಾದ ಚನ್ನಮಲ್ಲಪ್ಪ ಘಂಟಿ, ತಾ, ಪಂಚಾಯತ ಇಓ ಶ್ರೀ ಬಸವರಾಜ. ಪಿಡಬ್ಲ್ಯೂಡಿ ಎಇಇ ಯವರಾದ ಶ್ರೀ ಶಿವಾಜಿ,ಸಿಪಿಐ ಗುಂಡೂರಾವ್, ನಾಡ ತಹಶೀಲ್ದಾರ್ ಬಸವರಾಜ, ಪಿಎಸ್ಐ ಗಂಗಪ್ಪ ಬುರ್ಲಿ. ಗ್ರಾಮ ಪಂಚಾಯಿತ ಅಧ್ಯಕ್ಷರಾದ ಮಲ್ಲಮ್ಮ ಮನೋಹರ ನಾಗೋಲಿ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ತಿರುಮಲ ರೆಡ್ಡಿ .ಹಾಗೂ ವಿವಿಧ ಇಲಾಖೆಯ ಸಿಬ್ಬಂದಿಗಳು ಹಾಗೂ ಗ್ರಾಮ ಪಂಚಾಯತ ಸದಸ್ಯರು ಗ್ರಾಮದ ಸಾರ್ವಜನಿಕರು ಇದ್ದರು.

## ನ.18 : ಕನಕದಾಸ ಜಯಂತಿ ಅದ್ದೂರಿ ಆಚರಣೆ – ಬಸವಂತಪ್ಪ

ಉದ್ಯಮಿಗಳು, ಚುನಾಯಿತ ಪ್ರತಿನಿಧಿಗಳು ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಹಾಗೂ ರಾಜ್ಯ ನಿರ್ದೇಶಕರುಗಳು, ಜಿಲ್ಲಾ, ತಾಲ್ಲೂಕ, ನಗರ, ಯುವ ಕುರುಬ ಸಂಘದ ಪದಾಧಿಕಾರಿಗಳು ಮತ್ತು ಜಿಲ್ಲಾ ಮತ್ತು ತಾಲೂಕ ನೌಕರರ ಸಂಘದ ಪದಾಧಿಕಾರಿಗಳು ಪಾಲ್ಗೊಳ್ಳುವರು. ಕಾರ್ಯಕ್ರಮದಲ್ಲಿ ರಾಯಚೂರು ವಿಶ್ವವಿದ್ಯಾಲಯ ರಾಜ್ಯ ಶಾಸ್ತ್ರ ಸಹ ಪ್ರಾಧ್ಯಾಪಕ ಡಾ.ಕೆ.ವೆಂಕಟೇಶ ಅವರು ಉಪನ್ಯಾಸವನ್ನು ನೀಡಲಿದ್ದಾರೆ. ಶಿಕ್ಷಣ,

ವೈದ್ಯಕೀಯ, ಪತ್ರಿಕಾರಂಗ, ಸಮಾಜ ಸೇವೆ, ಸಂಗೀತ, ಸಾಹಿತ್ಯ, ಕ್ರೀಡೆ ಮತ್ತು ಸಹಕಾರ ರಂಗದಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹನೀಯರನ್ನು ಸನ್ಮಾನಿಸಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹನೀಯರೊಬ್ಬರಿಗೆ ಕನಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದ ಅವರು ಅವರು, ಕಾರ್ಯಕ್ರಮಕ್ಕೆ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಮನವಿ ಮಾಡಿದರು.

ಈ ಸಂದರ್ಭದಲ್ಲಿ ನಗರಸಭೆ ಮಾಜಿ ಸದಸ್ಯ ಈಶಪ್ಪ, ಕೆ. ನಾಗರಾಜ, ಸಂಗಮೇಶ, ಶೇಖರ್ ವಾರದ, ಮಹದೇವಪ್ಪ, ಹನುಮಂತಪ್ಪ ವಕೀಲ್, ಶಂಕರ್ ಪಾಟೀಲ್, ಬಿ,ಬಸವರಾಜ್ ಹನುಮಂತಪ್ಪ ಜಾಲಿಬೇಂಚಿ, ನಾಗೇಂದ್ರಪ್ಪ ಮಟಮಾರಿ,ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಯೋಜನೆಗಳನ್ನು ರೈತರಿಗೆ ತಲುಪಿಸಿ– ಕುಮಾರ ನಾಯಕ

ರೈತರು ಆರ್ಥಿಕವಾಗಿ ಸಬಲಗೊಂಡಾಗ ಮಾತ್ರ ದೇಶದ ಆರ್ಥಿಕತೆಯಲ್ಲಿ ಸ್ಥಿರತೆ ಕಾಯಲಿದೆ. ಅಲ್ಲದೆ ನಮಗೆಲ್ಲರಿಗೂ ಆಹಾರ ಸಿಗಲಿದೆ. ಹಾಗಾಗಿ ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆಯೊಂದಿಗೆ ಖರೀದಿ ಕೇಂದ್ರ ತೆರೆಯುವ ಮೂಲಕ ರೈತರ ಸಂರಕ್ಷಣೆ ನಮ್ಮೆಲ ಜವಾಬ್ದಾರಿಯಾಗಬೇಕಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾ-ರಿಯಾದ ಲವೀಶ್ ವಾರದ್, ಮೀನುಗಾರಿಕೆ ಇಲಾಖೆಯ ನಿರ್ದೇಶಕರಾದ ಶರಣಬಸವ ಶಟ್ಟಿ, ಪಶು ಸಂಗೋಪನೆ ಇಲಾಖೆಯ ಉಪ ನಿರ್ದೇಶಕರಾದ ರಾಜು ಸೇರಿ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಜೆಡಿಎಸ್‌ನಲ್ಲಿ ನಿಖಿಲ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ನ 16– ಹೈಪ್ರೊಫೈಲ್, ಹೈ ಟೆನ್ಷನ್ ಕ್ಷೇತ್ರವಾಗಿದ್ದ ಚನ್ನಪಟ್ಟಣ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆ ಮುಗಿದಿದೆ. ಗೆಲುವಿನ ಲೆಕ್ಕಾಚಾರದ ವಿಶ್ಲೇಷಣೆ ಶುರುವಾಗಿದೆ. ಕ್ಷೇತ್ರದಲ್ಲಿ ಭರ್ಜರಿ ಬೆಟ್ಟಿಂಗ್ ಕೂಡ ನಡೆಯುತ್ತಿದೆ.


ಜೆಡಿಎಸ್‌ನಲ್ಲಿ ನಿಖಿಲ್ ಕುಮಾರಸ್ವಾಮಿ ಗೆಲುವಿನ ನಿರೀಕ್ಷೆ ( Nikhil is expected to win in JDS) ಹೆಚ್ಚಿದ್ದು ಹುಮ್ಮಸ್ಸು ಮೂಡಿಸಿದೆ.

ಪಕ್ಷದ ಮುಖಂಡರು, ಕಾರ್ಯಕರ್ತರು ಉತ್ಸುಕರಾಗಿದ್ದಾರೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಗನ ಗೆಲುವಿನ ಭರವಸೆಯಲ್ಲಿ ಟೆಂಪಲ್ ರನ್ ಮಾಡುತ್ತಿದ್ದಾರೆ. ಕಾಂಗ್ರೆಸ್ ವಿರುದ್ಧ ಸೇಡು ತೀರಿಸಿಕೊಂಡ ಗತ್ತಿನಲ್ಲಿ ಜೆಡಿಎಸ್ ಇದೆ.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ತಮ್ಮ 92ನೇ ವಯಸ್ಸಿನಲ್ಲೂ ಏಳು ದಿನ ಕ್ಷೇತ್ರದಲ್ಲೇ ಠಿಕಾಣಿ ಹೂಡಿ ಕ್ಯಾಂಪೇನ್ ಮಾಡಿದರು. ಸಣ್ಣ ವಿವಾದವೂ ಇಲ್ಲದೇ ಚುನಾವಣಾ ಪ್ರಚಾರ ನಡೆಸಿದರು. ಇದಕ್ಕೆ ಬಿಜೆಪಿ ಕೂಡ ಸಾಥ್ ಕೊಟ್ಟಿತು.

ನಿಖಿಲ್ ಗೆಲ್ಲಿಸುವ ಮೂಲಕ ರಾಜ್ಯ ಸರ್ಕಾರಕ್ಕೆ ಮೆಸೇಜ್ ಕೊಡುವ ಉದ್ದೇಶವನ್ನು ಎನ್‌ಡಿಎ ನಾಯಕರು ಇಟ್ಟುಕೊಂಡಿದ್ದರು. ಈ ವಿಷಯದಲ್ಲಿ ಜೆಡಿಎಸ್, ಬಿಜೆಪಿ ಸಕ್ಸಸ್ ಆಗಿದೆ ಎಂಬ ಲೆಕ್ಕಾಚಾರವಿದೆ. ಶೇಕಡಾವಾರು ಮತ, ಬೂತ್ ಲೆಕ್ಕಾಚಾರ ನೋಡಿ ನಿಖಿಲ್ ಗೆಲ್ಲುವ ಆಶಾಭಾವನೆಯಲ್ಲಿ ಜೆಡಿಎಸ್ ಇದೆ. ಇದಕ್ಕೆ ಪೂರಕವಾಗಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಮಾತುಗಳು ನಿಖಿಲ್ ಗೆಲ್ಲುವ ವಿಶ್ವಾಸಕ್ಕೆ ಪುಷ್ಟಿ ನೀಡುವಂತಿವೆ.

# ಜಾಲಹಳ್ಳಿ: ಅಕಾಲಿಕ ಮಳೆಗೆ ನೆಲಕ್ಕುರಳಿದ ಭತ್ತ! ಪರಿಹಾರಕ್ಕೆ ಆಗ್ರಹ




ಮೌನೇಶ ಜಾಲಹಳ್ಳಿ

ಜಾಲಹಳಿ ನ 16– ಹೋಬಳಿ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ ಸುರಿದ ಅಕಾಲಿಕ ಮಳೆಯಿಂದಾಗಿ ಕಟಾವಿಗೆ ಬಂದ ಭತ್ತದ ಬೆಳೆ ನೆಲಕಚ್ಚಿದ್ದು, ಇಳುವರಿ ಕುಂಠಿತವಾಗುವ ಸಾಧ್ಯತೆ ಇದೆ ಎಂದು ರೈತರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಹೋಬಳಿ ವ್ಯಾಪ್ತಿಯ ಚಪ್ಪಳಕಿ, ಹಂಪರಗುಂದಿ, ಜಾಲಹಳ್ಳಿ,ತಿಮ್ಮಾಪೂರ್, ಸೀಮಾ ಮುದುಘೋಟ, ಲಿಂಗದಹಳ್ಳಿ, ಯರಗುಡ್ಡ, ಬಾಗೂರ,ಹೇರುಂಡಿ,ಗಾಣದಾಳ,ಮ್ಯಾಕಲದೊಡ್ಡಿ, ಸೇರಿದಂತೆ ಸುತ್ತಮುತ್ತಲಿನ ಬಹುತೇಕ ಹಳ್ಳಿಗಳಲ್ಲಿ ಆರ್.ಎನ್.ಆರ್, ಹಾಗೂ ಸೋನಾ ಮಸೂರಿ ಭತ್ತದ ಗದ್ದೆಗಳು ಮಳೆಗೆ ನೆಲಕಚ್ಚಿವೆ.

ಕೊಯ್ಲಿಗೆ ಸಿದ್ದಗೊಂಡ ಭತ್ತದ ಗದ್ದೆ ಸಂಪೂರ್ಣವಾಗಿ ನೆಲಕಚ್ಚಿದ್ದು ಬೆಳೆ ಉತ್ತಮವಾಗಿದ್ದರೂ ಮಳೆಯಿಂದ ಬೆಳೆ ಹಾಗೂ ಇಳುವರಿಯ ಮೇಲೆ ಪ್ರಭಾವ ಬೀರುತ್ತದೆ, ಅಧಿಕಾರಿಗಳು ಸರ್ವೆ ಮಾಡಿ ಪರಿಹಾರ ನೀಡಬೇಕೆಂದು ಚಪ್ಪಳಕಿ ಸೀಮಾಂತರದ ರೈತರೊಬ್ಬರು ದೂರು ನೀಡಿದ್ದಾರೆ.

ಭತ್ತ ನೆಲಕ್ಕೆ ಬಿಟ್ಟಲ್ಲಿ ಮೊಳಕೆ ಒಡೆಯುವ ಸಾಧ್ಯತೆ ಇದ್ದು, ಒಂದೆರಡು ದಿನ ಬಿಸಿಲು ಬಂದರೆ ಮಾತ್ರ ಕೊಯ್ಯಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇನ್ನೂ ಹೆಚ್ಚಿನ ನಷ್ಟ ಸಂಭವಿಸಬಹುದು ಎಂದು ಈ ಭಾಗದ ರೈತರ ಮಾತಾಗಿದೆ.

ಕೃಷಿ ಮತ್ತು ಕಂದಾಯು ಅಧಿಕಾರಿಗಳು ಜಂಟಿ ಸರ್ವೆ ಮಾಡಿ ನಷ್ಟಕೊಳಗಾದ ರೈತರಿಗೆ ಪರಿಹಾರ ನೀಡಬೇಕಾಗಿದೆ.

ಬೆಳೆ ನಷ್ಟಕ್ಕೊಳಗಾದ ರೈತರು ಕಂದಾಯ ಅಧಿಕಾರಿಗಳು ಹಾಗೂ ಕೃಷಿ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು, ಅಧಿಕಾರಿಗಳು ಸಮಿಕ್ಷೆ ಮಾಡಿ ವರದಿ ಸಲ್ಲಿಸುತ್ತಾರೆ.

ತಕ್ಷಣ ವರದಿಯನ್ನ ಜಿಲ್ಲಾಧಿಕಾರಿಗಳಿಗೆ ಶಿಫಾರಸು ಮಾಡಿ ಸರಕಾರದಿಂದ ಪರಿಹಾರ ಕೊಡಿಸಲಾಗುವುದು.

–ಚೆನ್ನಮಲ್ಲಟ ಘಂಟಿ
ತಹಶಿಲ್ದಾರರರು ದೇವದುರ್ಗ

ಅಧಿಕಾರಿಗಳು ಬೆಳೆ ಸರ್ವೆ ಮಾಡಿ ನಷ್ಟಕ್ಕೊಳಗಾದ ರೈತರಿಗೆ ಪರಿಹಾರ ನೀಡಬೇಕು.

ನಿರ್ಲಕ್ಷ್ಯ ವಹಿಸಿದರೆ ತಹಶೀಲ್ ಕಛೇರಿ ಮುಂದೆ ಪ್ರತಿಭಟನೆ ಮಾಡಲಾಗುವುದು.

–ಹನುಮಂತ ಗುರಿಕಾರ
ತಾಲೂಕ ಅದ್ಯಕ್ಷರು ಪ್ರಾಂತ ರೈತ ಸಂಘ

# ಸಂಭ್ರಮದಿಂದ ಗೌರಿ ಹಬ್ಬ ಆಚರಣೆ



ಜನವಾದಿ ವಾರ್ತೆ

ಸಿಂಧನೂರು ನ 16 – ನಗರದ ಸಿಂಪಿಗೇರ್ ಓಣಿಯ ಹಿರಿಯ ಪತ್ರಿಕಾ ವಿತರಕ ಕೊಟ್ಟೂರೇಶ್ವರ ಸ್ವಾಮಿ ಅವರ ನಿವಾಸದಲ್ಲಿ ಗೌರಿ ಹಬ್ಬದ ಹಿನ್ನಲೆಯಲ್ಲಿ ಗೌರಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ಸಕ್ಕರೆ ಆರತಿ ಬೆಳಗುವ ಮೂಲಕ ಹಬ್ಬವನ್ನು ಸಡಗರ-ಸಂಭಮದಿಂದ ಆಚರಿಸಲಾಯಿತು.

ಗೌರಿ ಹುಣ್ಣಿಮೆಯ ದಿನವಾದ ಶುಕ್ರವಾರ ಸಂಜೆ ಸುತ್ತಮುತ್ತಲಿನ ಮನೆಗಳ ಮಹಿಳೆಯರು ಬಂದು ಆರತಿ ಬೆಳಗಿದರು. ಕಳೆದ 43 ವರ್ಷಗಳಿಂದ ಹಬ್ಬ ಆಚರಿಸುತ್ತಾ ಬರಲಾಗಿದೆ.

ಗಿರಿಜಮ್ಮ ಕೊಟ್ಟುರೇಶ ಸ್ವಾಮಿ, ಮಹಾಂತಮ್ಮ ಸಿದ್ದಲಿಂಗಯ್ಯ ಸ್ವಾಮಿ, ಗೌರಮ್ಮ ಬಸವರಾಜ ಸಿದ್ಧಾಂತಿಮಠ, ದೀಪಾ ಸೋಮನಾಥ, ಸುಮಂಗಲ ಮಂಜುನಾಥ, ಅಶ್ವಿನಿ ಗಣೇಶ್, ದ್ರಾಕ್ಷಾಯಿಣಿ ಮಲ್ಲಪ್ಪ, ನಂದಿನಿ ಚನ್ನಬಸಯ್ಯ, ಸೂಗಮ್ಮ ಸಿದ್ದಲಿಂಗಪ್ಪ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಜಿಲ್ಲಾ ಮಕ್ಕಳ ರಕ್ಷಣಾ ಘಟಕ; ಶಿಕ್ಷಕರ ಭರ್ತಿಗೆ ಅರ್ಜಿ ಆಹ್ವಾನ

ಜನವಾದಿ ವಾರ್ತೆ

ರಾಯಚೂರು ನ 16 – ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು ರವರ ಮಾರ್ಗಸೂಚಿ ಅನುಸಾರ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ರಾಯಚೂರು ಜಿಲ್ಲೆಯಲ್ಲಿ ಬಾಲಕರ ಅಥವಾ ಬಾಲಕಿಯರ ಬಾಲಮಂದಿರದಲ್ಲಿ ಓದುತ್ತಿರುವ ಪ್ರೌಢಶಾಲಾ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಯರಿಗೆ ಟ್ಯೂಶನ್ ಹೇಳಲು ಅರೆಕಾಲಿಕ ಸೇವೆ ತಾತ್ಕಾಲಿಕ ಗೌರವಧನ ಆಧಾರದ ಮೇಲೆ ವಿಷಯ ಶಿಕ್ಷಕರನ್ನು ಭರ್ತಿ ಮಾಡಿಕೊಳ್ಳಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಗಣಿತ ಮತ್ತು ವಿಜ್ಞಾನ ಶಿಕ್ಷಕರ ಹುದ್ದೆಗೆ ಃ.ಖಿಛಿ, ಃ.ಇಜ ಹುದ್ದೆಗಳ ಸಂಖ್ಯೆ;02, ಇಂಗ್ಲೀಷ ಶಿಕ್ಷಕರು ಹುದ್ದೆಗೆ ಃಂ, ಃ.ಇಜ ಹುದ್ದೆಗಳ ಸಂಖ್ಯೆ; 02 ಸೇರಿದಂತೆ ಒಟ್ಟು 04ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿಯನ್ನು ಇದೇ ನ.26ರ ಸಂಜೆ 5;30ಗಂಟೆಯೊಳಗಾಗಿ ಸಲ್ಲಿಸಲು ತಿಳಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ, ಮ.ನಂ. 1-9-138, ಮಾರೆಮ್ಮ ಗುಡಿ ಹತ್ತಿರ, ಗೋಲ್ ಮಾರ್ಕೆಟ್, ಆಜಾದ್ ನಗರ, ರಾಯಚೂರು-584101. ದೂರವಾಣಿ ಸಂ: 08532-226226ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾ ಮಕ್ಕಳ ಘಟಕದ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಕಾಲಿಕ ಮಳೆಯಿಂದ ನೆಲಕಚ್ಚಿದ ಭತ್ತ ; ಆತಂಕದಲ್ಲಿ ಅನ್ನದಾತ

ಜನವಾದಿ ವಾರ್ತೆ

ಕವಿತಾಳ ನ 16 – ಸಮೀಪದ ಗಂಗಾನಗರ ಕ್ಯಾಂಪ್, ಸೂಸೈಟಿ ಕ್ಯಾಂಪ್ ಮತ್ತು ಮಲ್ಲದಗುಡ್ಡ ಸೇರಿದಂತೆ ಕವಿತಾಳ ಪಂಚಾಯಿತಿ ವ್ಯಾಪ್ತಿಯ ವಿವಿಧ ಹಳ್ಳಿಗಳಲ್ಲಿ ಗುರುವಾರ ಸಂಜೆ ಸುರಿದ ಅಕಾಲಿಕ ಮಳೆಯಿಂದ ಭತ್ತದ ಬೆಳೆ ಸಂಪೂರ್ಣ ನೆಲ ಕಚ್ಚಿದ್ದು, ರೈತರು ನಷ್ಟ ಅನುಭವಿಸುವಂತಾಗಿದೆ.

ಮಲ್ಲದಗುಡ್ಡ ಮತ್ತು ಮೆಹಬೂಬ ನಗರ ಕ್ಯಾಂಪ್ ಮತ್ತಿತರ ಕಡೆ ಧಾರಾಕಾರ ಮಳೆಯಾಗಿದ್ದು, ಕಟಾವು ಹಂತದ ಭತ್ತದ ಬೆಳೆ ನೆಲಕ್ಕೆ ಬಾಗಿದೆ. ಗದ್ದೆಗಳಲ್ಲಿ ಕೆಸರು ಉಂಟಾಗಿ ಅತ್ತ ಕಟಾವು ಮಾಡಲು ಸಾಧ್ಯವಿಲ್ಲ ಇತ್ತ ಬಿಡಲು ಆಗದಂತ ಸಂದಿಗ್ದ ಪರಿಸ್ಥಿತಿಯಲ್ಲಿ ರೈತರು ಪರದಾಡುತ್ತಿದ್ದಾರೆ.

ನೂರಾರು ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಭತ್ತ, ಮಳೆಯಿಂದಾಗಿ ನೆಲಕ್ಕುರುಳಿದೆ.ಇನ್ನೂ ಹತ್ತು ದಿನಗಳಲ್ಲಿ ಕಟಾವು ಮಾಡಲು ಯೋಚಿಸಲಾಗಿತ್ತು,ಸಂಪೂರ್ಣ ಒಣಗಲಿ ಎಂದು ಕಟಾವು ಮಾಡಿರಲಿಲ್ಲ. ಈಗ ಸುರಿದ ಮಳೆಯಿಂದ ನಷ್ಟ ಅನುಭವಿಸುವಂತಾಗಿದೆ. ಭತ್ತದ ಗದ್ದೆಗಳನ್ನು ಪರಿಶೀಲನೆ ಮಾಡಿ ಸೂಕ್ತ ಪರಿಹಾರ ನೀಡಬೇಕು ಎಂದು ರೈತರು ಒತ್ತಾಯಿಸಿದರು.



ಭತ್ತದ ಬೆಳೆ ಸಂಪೂರ್ಣವಾಗಿ ನೆಲಕಚ್ಚಿದೆ. ಸ್ಥಳಕ್ಕೆ ಭೇಟಿ ನೀಡಿ ಸಮೀಕ್ಷೆ ನಡೆಸುವಂತೆ ಕಂದಾಯ ಇಲಾಖೆ ಅಧಿಕಾರಿಗಳಿಗೆ ಮತ್ತು ತಹಶೀಲ್ದಾರರಿಗೆ ಮನವಿ ಮಾಡಿದ್ದರೂ, ಇದುವರೆಗೂ ಯಾರೊಬ್ಬರೂ ಬಂದಿಲ್ಲ. ಇನ್ನೂ ಎರಡು ದಿನ ಮಳೆ ಬರುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ವರದಿ ಹೇಳಿದ್ದು,ನಂತರ ಸಮೀಕ್ಷೆ ನಡೆಸುವುದಾಗಿ ಅಧಿಕಾರಿಗಳು ಹೇಳುತ್ತಿದ್ದಾರೆ ಎಂದು ರೈತರಾದ ಮೌನೇಶ, ಮಲ್ಲಪ್ಪ, ವೆಂಕೋಬ, ಮಂಜುನಾಥಸ್ವಾಮಿ, ಲಿಂಗಯ್ಯ ಜವಳಗೇರ, ಹನುಮಂತ ಕಾವಲಿ ಹೇಳಿದರು.

# ಭತ್ತ, ತೊಗರಿ ಖರೀದಿ ಕೇಂದ್ರ ಪ್ರಾರಂಭಿಸುವಂತೆ ಮನವಿ



ಜನವಾದಿ ವಾರ್ತೆ

ಮಾನ್ವಿ ನ 16– ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಕರ್ನಾಟಕ ರೈತ ಸಂಘ ತಾಲೂಕು ಸಮಿತಿ ವತಿಯಿಂದ ತಹಸೀಲ್ದಾರರಿಗೆ ಗ್ರೇಡ್-2 ತಹಸೀಲ್ದಾರ್ ಅಬ್ದುಲ್ ವಾಹಿದ್ ರವರಿಗೆ ಜಿಲ್ಲಾಧ್ಯಕ್ಷ ಅಶೋಕ ನಿಲೋಗಲ್ ಮನವಿ ಸಲ್ಲಿಸಿ ಮಾತನಾಡಿ ತಾಲೂಕಿನಲ್ಲಿ ರೈತರು ಬೆಳೆದ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇಲ್ಲದೆ ಇರುವುದರಿಂದ ಕೂಡಲೇ ಸರಕಾರದಿಂದ ಭತ್ತ ,ತೊಗರಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಿ ಅನಿಯಮಿತವಾಗಿ ನೇರವಾಗಿ ಕೃಷಿ ಉತ್ಪನ್ನಗಳನ್ನು ಖರೀದಿಸಿ ತಕ್ಷಣವೇ ರೈತರ ಖಾತೆಗೆ ಹಣವನ್ನು ಜಮಾ ಮಾಡಬೇಕು. ಹಾಗೂ ರೈತರಿಗೆ ವಂಚನೆ ಯಾಗದಂತೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ವತಿಯಿಂದ ವಿಚಕ್ಷಣ ತಂಡಗಳನ್ನು ರಚಿಸಿ ಅಗತ್ಯವಾದ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ತಾ.ಅಧ್ಯಕ್ಷರಾದ ವೀರೇಶನಾಯಕ, ಸಿರವಾರ ತಾ.ಅಧ್ಯಕ್ಷರಾದ ಶಿವಯ್ಯನಾಯಕ, ಹುಲಿಗೆಪ್ಪ ಸಿರವಾರ, ಕೃಷ್ಣಮೂರ್ತಿ ಕೆ.ಗುಡದಿನ್ನಿ, ಹನುಮಂತ ಸಿರವಾರ, ಶಿವರಾಜ ದೊಡ್ಡಿ, ನಾಗರಾಜ ಸಿರವಾರ, ಮಲ್ಲೇಶ ಮದ್ಲಾಪುರ್, ಸೇರಿದಂತೆ ಇನ್ನಿತರರು ಇದ್ದರು.

# ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಚಂದ್ರಶೇಖರ ಹಿರೇಮಠ ಆಯ್ಕೆ



ಜನವಾದಿ ವಾರ್ತೆ

ಸಿಂಧನೂರು ನ 16 – ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಸಿಂಧನೂರು ತಾಲೂಕಾ ಅಧ್ಯಕ್ಷರಾಗಿ ಚಂದ್ರಶೇಖರ ಹಿರೇಮಠ ಆಯ್ಕೆಯಾದರು.

34 ಸ್ಥಾನ ಬಲದ ನೌಕರರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಶನಿವಾರ ತಾ.ಪಂ.ಸಭಾಂಗಣದಲ್ಲಿ ಚುನಾವಣೆ ನಡೆಯಿತು. ಚಂದ್ರಶೇಖರ ಹಿರೇಮಠ 22 ಮತಗಳನ್ನು ಪಡೆದು ಜಯಶಾಲಿಗಳಾದರೆ ಇನ್ನೂ ವೀರೇಶ ಸಾಸಲಮರಿ 12 ಮತಗಳನ್ನು ಪಡೆಯುವ ಮೂಲಕ ಸೋಲು ಕಂಡರು. ಅಧ್ಯಕ್ಷ ಸ್ಥಾನಕ್ಕೆ ಇಬ್ಬರು ನಾಮಪತ್ರ ಸಲ್ಲಿಕೆ ಮಾಡಿದ್ದರು. ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿನ ಕೆಲವು ಗೊಂದಲಗಳಿಂದ ಚುನಾವಣಾಧಿಕಾ-ರಿಗಳ ನಡೆ ಚರ್ಚೆಗೆ ಕಾರಣವಾಗಿತ್ತು. ಆದರೆ ಇಂದು ಸುಸೂತ್ರವಾಗಿ ಚುನಾವಣೆ ನಡೆದು, ಮತಗಳ ಎಣಿಕೆಯೂ ನಡೆಯಿತು. ಇಬ್ಬರು ಅಭ್ಯರ್ಥಿಗಳು ಸತಾಯ ಗತಾಯ ಗೆಲ್ಲಲೇಬೇಕು ಎನ್ನುವ ನಿಟ್ಟಿನಲ್ಲಿ ನಾನಾ ತಂತ್ರಗಳನ್ನು ಬಳಸಿದ್ದರು. ಚುನಾವಣಾಧಿಕಾರಿಗಳಾಗಿ ನಿವೃತ್ತ ಮುಖ್ಯಗುರು ಬಿ.ರವಿಯಪ್ಪ, ಸಹಾಯಕ ಚುನಾವಣಾಧಿಕಾರಿಯಾಗಿ ಅಮರಯ್ಯ ಸ್ವಾಮಿ ಕಾರ್ಯನಿರ್ವಹಿಸಿದರು.

ಚುನಾವಣಾ ಫಲಿತಾಂಶ ಹೊರ ಬೀಳುತ್ತಿದ್ದಂತೆ ಚಂದ್ರಶೇಖರ ಹಿರೇಮಠ ಅವರ ಬೆಂಬಲಿಗರು ಹೂ ಮಾಲೆ ಹಾಕಿ ವಿಜಯೋತ್ಸವ ಆಚರಿಸಿದರು.

# ಶ್ರೀ ನಾರಾಯಣ ತೀರ್ಥ ಆಶ್ರಮದಲ್ಲಿ ಸಂಪೂರ್ಣ ಭಾಗವತ ಪ್ರವಚನಾ ಜ್ಞಾನ ಸತ್ರ ಕಾರ್ಯಕ್ರಮ

ಜನವಾದಿ ವಾರ್ತೆ

ಮಾನ್ವಿ ನ 16– ಪಟ್ಟಣದ ಶ್ರೀ ನಾರಾಯಣ ತೀರ್ಥ ಆಶ್ರಮದಲ್ಲಿ ನಾರಾಯಣತೀರ್ಥ ಶ್ರೀಪಾದಂಗಳವರ 51 ನೇ ಆರಾಧನಾ ಮಹೋತ್ಸವದ ಅಂಗವಾಗಿ ಸಂಪೂರ್ಣ ಭಾಗವತ ಪ್ರವಚನಾ ಪುರಾಣ ಜ್ಞಾನ ಸತ್ರ ಕಾರ್ಯಕ್ರಮವು ಡಿ.4 ರವರೆಗೆ ನಡೆಯಲಿದ್ದು ಸಿಂಧನೂರಿನ ಪಂ. ಗೋವಿಂದಾಚಾರ್ಯರಿಂದ ಭಾಗವತಸ್ಕಂದಗಳಿಂದ 1 ರಿಂದ 3 ಸ್ಕಂದಗಳು ನ.19 ರವರೆಗೆ ಸಂಜೆ 5.30 ರಿಂದ, ಬೆಂಗಳೂರಿನ ಪಂ. ಗುರುರಾಜದಾಸರಿಂದ 4 ರಿಂದ 6 ನೇ ಸ್ಕಂದಗಳು ನ.20 ರಿಂದ 22 ರವರೆಗೆ ಪ್ರತಿದಿನ ಬೆ.9.30 ರಿಂದ , ಸಾಲಗುಂದಾ ಪಂ.ರಂಗನಾಥಚಾರ್ಯ ರಿಂದ 7 ರಿಂದ 9 ರವರೆಗಿನ ಸ್ಕಂದಗಳು,ನ.25 ರಿಂದ 29 ರವರೆಗೆ ಸಂಜೆ 5.30 ರಿಂದ , ಸಿರವಾರ ಪಂ.ಗೋಪಾಲಚಾರ್ಯರಿಂದ ನ. 30 ರಿಂದ ಡಿ. 4 ರವರೆಗೆ 10 ರಿಂದ 12 ರವರೆಗಿನ ಸ್ಕಂದಗಳ ಬಗ್ಗೆ ಸಂಜೆ 5.30 ರಿಂದ ಪ್ರವಚನಾ ನಡೆಯಲಿದ್ದು ಡಿ.4 ರಂದು ಶ್ರೀ ರಘುವೀರ ತೀರ್ಥರ ಆರಾಧನೆಯಂದು ಭಾಗವತ ಪ್ರವಚನಾ ಪುರಾಣ ಮಂಗಳ ಮಹೋತ್ಸವ ನಡೆಯಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವಂತೆ ಶ್ರೀ ನಾರಾಯಣ ತೀರ್ಥ ಆಶ್ರಮದ ಪ್ರಕಟಣೆಯಲ್ಲಿ ಕೋರಲಾಗಿದೆ.



# ಕ್ರಿಕೆಟ್: ಜಿಲ್ಲೆಯ 4 ವಿದ್ಯಾರ್ಥಿಗಳು ರಾಷ್ಟಮಟ್ಟಕ್ಕೆ ಆಯ್ಕೆ



ಜನವಾದಿ ವಾರ್ತೆ

ಲಿಂಗಸೂಗೂರು ನ 16– ಚಿಕ್ಕೋಡಿಯಲ್ಲಿ ನಡೆದ ರಾಜ್ಯಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿದ ತಾಲೂಕಿನ 3 ವಿದ್ಯಾರ್ಥಿಗಳು ಹಾಗೂ ಮಾನವಿ ತಾಲೂಕಿನ ಒಬ್ಬ ವಿದ್ಯಾರ್ಥಿ ರಾಷ್ಟಮಟ್ಟದ ಕ್ರಿಕೆಟ್ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ.

ಜಿಲ್ಲಾ ಆಡಳಿತ ಬೆಳಗಾವಿ ಜಿಲ್ಲಾ ಪಂಚಾಯತ್ ಬೆಳಗಾವಿ ಉಪನಿರ್ದೇಕರ ಕಾರ್ಯಾಲಯ ಶಾಲಾ ಶಿಕ್ಷಣ ಇಲಾಖೆ ಚಿಕ್ಕೋಡಿ ಕ್ಷೇತ್ರ ಶಿಕ್ಷಣಾಧಿಕರಿಗಳ ಕಾರ್ಯಾಲಯ ಗೋಕಾಕ್ ಹಾಗೂ ಪ್ರಾಥಮಿಕ ಪ್ರೌಢ ಶಾಲಾ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಸಂಯುಕ್ತಾಶ್ರದಲ್ಲಿ 14 ಮತ್ತು 17 ವರ್ಷ ವಯೋಮಿತಿಯ ಬಾಲಕ/ಬಾಲಕಿಯರ ರಾಜ್ಯಮಟ್ಟದ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಲಿಂಗಸುಗೂರು ತಾಲೂಕಿನ ಲೆದರ್ ಬಾಲ್ ಇಂಡಿಯನ್ ಪಬ್ಲಿಕ್ ಕ್ರಿಕೆಟ್ ಅಕಾಡೆಮಿಯ ಜೀವನ್ ಕುಮಾರ್ ಬಿ.ಆರ್.ಎಸ್.ಬಿ.ಪಬ್ಲಿಕ್ ಆಂಗ್ಲ ಮಾಧ್ಯಮ ಶಾಲೆ ಹಟ್ಟಿ ಚಿನ್ನದ ಗಣಿ, ಸ್ಕಂದ.ಎಸ್.ಮೇಟಿ, ಆಂಗ್ಲಿಸ್ಟ್ ಆಂಗ್ಲ ಮಾಧ್ಯಮ ಶಾಲೆ ಲಿಂಗಸುಗೂರು, ಅಭಿಷೇಕ.ಜಿ. ಸ್ಪಂದನ ಆಂಗ್ಲ ಮಾಧ್ಯಮ ಶಾಲೆ ಲಿಂಗಸುಗೂರ ಹಾಗೂ ಮಾನವಿ ತಾಲೂಕಿನ ಶೇಖ್ ಮೊಹಮದ್ ಯೂಸುಫ್ ರಾಷ್ಟಮಟ್ಟಕ್ಕೆ ಆಯ್ಕೆಯಾಗಿ ತಾಲೂಕಿಗೆ ಹಾಗೂ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಕ್ರಿಕೆಟ್ ಕೋಚ್ ಅಹ್ಮದ್ ಖಾದರ್ ಬಾಷ್ ಹಾಗೂ ದೈಹಿಕ ಶಿಕ್ಷಕರು ಮತ್ತು ಅಜ್ಮೀರ್ ಅವರ ನೇತೃತ್ವದಲ್ಲಿ ಲಿಂಗಸುಗೂರು ತಾಲೂಕು ಕ್ರೀಡಾಂಗಣದಲ್ಲಿ ಸತತ 13 ವರ್ಷಗಳಿಂದ ಪ್ರಾಥಮಿಕ ಹಾಗೂ ಪ್ರಾಢಶಾಲಾ ವಿದ್ಯಾರ್ಥಿಗಳಿಗೆ ಉಚಿತ ಕ್ರಿಕೆಟ್ ಕೋಚಿಂಗ್ ನೀಡುತ್ತಿದ್ದಾರೆ. ಇವರ ಕೋಚಿಂಗ್‌ನಲ್ಲಿ ಆಕಾಡೆಮಿಯಿಂದ ತಾಲೂಕಿನ 3 ವಿದ್ಯಾರ್ಥಿಗಳು ರಾಷ್ಟಮಟ್ಟಕ್ಕೆ ಆಯ್ಕೆಯಾಗಿರುವುದು ಹೆಮ್ಮೆ ವಿಷಯ ಎಂದು ಕೋಚ್ ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿ ಶುಭ ಹಾರೈಸಿದರು.

Printed by , Published by, Owned by : basavaraj H , Printed and Published at Basavashree Printers and Publishers, H.No.1-11-54/32, Prashanth Colony, RAICHUR-584101. Editor. BASAVARAJ H